ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

# ಹಾಸನ

# ಹೇಮ ದೀವಿಗೆ

## ಸಂಚಿಕೆ-2



## ಸಮಾಜ ವಿಜ್ಞಾನ 10ನೇ ತರಗತಿ

2023-24

## ವಸ್ತುನಿಷ್ಠ ಪ್ರಶ್ನೋತ್ತರ ಮಾಲಿಕೆ

## ಆಶಯ ನುಡಿ



2023-24 ನೇ ಸಾಲನ್ನು "ಗುಣಾತ್ಮಕ ಶೈಕ್ಷಣಿಕ ವರ್ಷ" ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ದೃಷ್ಟಿಯಿಂದ ಡಯಟ್ ವತಿಯಿಂದ FLN ಮಾಸಾಚರಣೆ, ಭಾಷಾ ಮಾಸಾಚರಣೆ, ಗಣಿತ ಮಾಸಾಚರಣೆಯಂತಹ ಅನೇಕ ವಿಶೇಷ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂಪಿಸಿ ಯಶಸ್ವಿಯಾಗಿ ಅನುಷ್ಟಾನಿಸಲಾಗಿದೆ. ಮುಂದುವರಿದು 2023-24 ನೇ ಸಾಲಿನಲ್ಲಿ ಜಿಲ್ಲೆಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗುಣಾತ್ಮಕ ಫಲಿತಾಂಶವನ್ನು ಪಡೆಯಲು ಅನುಕೂಲವಾಗುವಂತೆ ಬೆಂಬಲಾಧಾರಿತ ಕಾರ್ಯಕ್ರಮವಾಗಿ ವಸ್ತುನಿಷ್ಟ ಪ್ರಶ್ನೋತ್ತರ ಕೋಠಿಯನ್ನು ಸಿದ್ದಪಡಿಸಿ ಶಾಲೆಗಳಿಗೆ ನೀಡಲಾಗುತ್ತಿದೆ. ಈಗಾಗಲೇ ಜಿಲ್ಲೆಯು ಕಳೆದ ಸಾಲಿನಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿರುವುದರ ಜೊತೆಗೆ ಗುಣಾತ್ಮಕ ಫಲಿತಾಂಶವನ್ನು ಪಡೆದಿರುವುದು ಶ್ಲಾಘನೀಯ ಸಂಗತಿಯಾಗಿದೆ. ಕಳೆದ ಸಾಲಿನಲ್ಲಿ ಡಯಟ್ ವತಿಯಿಂದ ಅನ್ವಯಿಕ ಪ್ರಶ್ನೆ ಕೋಟಿಯನ್ನು ಸಿದ್ಧಪಡಿಸಿ ನೀಡಲಾಗಿದ್ದು, ಈ ಸಾಲಿನಲ್ಲಿ ಈಗಾಗಲೇ ತಿಳಿಸಿದಂತೆ ಪರೀಕ್ಷಾ ಫಲಿತಾಂಶವನ್ನು ಉತ್ತಮಪಡಿಸುವ ದೃಷ್ಟಿಯಿಂದ ಪ್ರತಿ ಘಟಕಕ್ಕೂ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಒಂದು ಅಂಕದ ಪ್ರಶ್ನೆ ಉತ್ತರಗಳನ್ನು ಒಳಗೊಂಡ ಕೈಪಿಡಿಯನ್ನು ರೂಪಿಸಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಶಾಲಾ ಹಂತದಲ್ಲಿ ವಿಶೇಷ ತರಗತಿಗಳು, ಗುಂಪು ಅಧ್ಯಯನ, ದತ್ತು ಯೋಜನೆ, ಇತ್ಯಾದಿ ಚಟುವಟಿಕೆಗಳನ್ನು ಮಕ್ಕಳ ಕಲಿಕೆಗೆ ಪೂರಕವಾಗುವಂತೆ ಜಾರಿಗೊಳಿಸಿದ್ದು, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ KSEAB ನಿರ್ದೇಶನದಂತೆ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಳಸಿಕೊಂಡು ಪೂರ್ವ ಸಿದ್ಧತೆ ನಡೆಸುವ ಉದ್ದೇಶದೊಂದಿಗೆ ಈ ಕೈಪಿಡಿಯನ್ನು ಹೊರತರಲಾಗುತ್ತಿದೆ. ಇದನ್ನು ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳ ವಿಷಯ ಶಿಕ್ಷಕರುಗಳು ಬಳಸಿಕೊಂಡು ಜಿಲ್ಲೆಗೆ ಉತ್ತಮ ಫಲಿತಾಂಶವನ್ನು ಒದಗಿಸಿಕೊಡಲು ಶ್ರಮಿಸುವಂತೆ ತಿಳಿಸಿದೆ.

ಇದಕ್ಕೆ ಶ್ರಮಿಸಿದ ಡಯಟ್‌ನ ಎಲ್ಲಾ ಅಧಿಕಾರಿ ವರ್ಗದವರು ಮತ್ತು ಸಂಪನ್ಮೂಲ ಸಾಹಿತ್ಯ ಹೊರಬರಲು ಸಹಕರಿಸಿದ ಎಲ್ಲಾ ಸಂಪನ್ಮೂಲ ಶಿಕ್ಷಕರಿಗೆ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸಿದೆ.

ಶ್ರೀಮತಿ ಪುಷ್ಪಲತಾ ಹೆಚ್ ಕೆ
ಉಪನಿರ್ದೇಶಕರು (ಅಭಿವೃದ್ಧಿ)
ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತಿ ತರಬೇತಿ ಸಂಸ್ಥೆ,
ಹಾಸನ ಜಿಲ್ಲೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಸನ

## ಎಸ್.ಎಸ್ ಎಲ್.ಸಿ ಸಮಾಜ ವಿಜ್ಞಾನ ವಿಷಯದ ಒಂದು ಅಂಕದ ಪ್ರಶ್ನೋತ್ತರ

## ಸಂಪನ್ಮೂಲ ಸಾಹಿತ್ಯ

**ಪರಿಕಲ್ಪನೆ ಮತ್ತು ಮಾರ್ಗದರ್ಶನ**

ಶ್ರೀಮತಿ ಹೆಚ್.ಕೆ. ಪುಷ್ಪಲತಾ
ಉಪನಿರ್ದೇಶಕರು (ಅಭಿವೃದ್ಧಿ)
ಡಯಟ್ ಹಾಸನ

**ಸಮನ್ವಯ**

ಶ್ರೀಮತಿ ವೇದಾವತಿ, ಹಿರಿಯ ಉಪನ್ಯಾಸಕರು ಡಯಟ್ ಹಾಸನ
ಶ್ರೀಮತಿ ಶಾರದ, ಉಪನ್ಯಾಸಕರು ಡಯಟ್ ಹಾಸನ
ಶ್ರೀಯುತ ಸೋಮಶೇಖರ್ ಬಿ.ಎಸ್. ಉಪನ್ಯಾಸಕರು ಡಯಟ್ ಹಾಸನ

**ಎಸ್.ಎಸ್ ಎಲ್.ಸಿ ಸಮಾಜ ವಿಜ್ಞಾನ ವಿಷಯದ ಒಂದು ಅಂಕದ ಪ್ರಶ್ನೋತ್ತರ**

**ಸಂಪನ್ಮೂಲ ಸಾಹಿತ್ಯವನ್ನು**

**ಸಿದ್ಧಪಡಿಸಲು ಭಾಗವಹಿಸಿದ ಸಂಪನ್ಮೂಲ ಶಿಕ್ಷಕರ ತಂಡ**

1. ಶ್ರೀ ಅನಂತರಾಜು. ಸಿ.ಇ, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ದೇವಿಹಳ್ಳಿ, ಹಾಸನ ತಾಲ್ಲೂಕು.
2. ಶ್ರೀ ಭೈರಯ್ಯ ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಸಂಕನಹಳ್ಳಿ, ಹೊಳೆನರಸೀಪುರ ತಾಲ್ಲೂಕು.
3. ಶ್ರೀ ದೇವರಾಜು.ಸಿ.ಇ ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಗುಲಸಿಂದ ಚನ್ನರಾಯಪಟ್ಟಣ ತಾಲ್ಲೂಕು.
4. ಶ್ರೀ ಬಸವರಾಜು ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಕೆಂಬಾಳು ಚನ್ನರಾಯಪಟ್ಟಣ ತಾಲ್ಲೂಕು
5. ಶ್ರೀ ರಾಮೇಗೌಡ ಸಿ.ಇ, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಪೂಮಗಾಮೆ ಹಾಸನ ತಾಲ್ಲೂಕು.
6. ಶ್ರೀ ಚಿದಾನಂದ ಸಹಶಿಕ್ಷಕರು, ಬಾಲಕಿಯರ ಸರ್ಕಾರಿ ಪದವಿಪೂರ್ವಕಾಲೇಜು (ಪ್ರಧಾನ) ಹಾಸನ
7. ಶ್ರೀ ಮಂಜುನಾಥ ಸಹಶಿಕ್ಷಕರು ಸರ್ಕಾರಿ ಪ್ರೌಢಶಾಲೆ ದಿಡಗ ಚನ್ನರಾಯಪಟ್ಟಣ ತಾಲ್ಲೂಕು.

**ಇತಿಹಾಸ**

## ಆಧ್ಯಾಯ –1 ಭಾರತಕ್ಕೆ ಯುರೋಪಿಯನ್ನರ ಆಗಮನ

### ಬಹು ಆಯ್ಕೆ ಪ್ರಶ್ನೆಗಳು

1. ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಹೊಂದಿದ್ದ ವರ್ತಕರು

ಎ) ಅರಬ್ಬರು ಬಿ) ಇಟಲಿಯವರು ಸಿ) ಬ್ರಿಟಿಷರು ಡಿ)ಫ್ರೆಂಚರು

2. 1453 ರಲ್ಲಿ ಕಾನ್ ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು

ಎ) ಬ್ರಿಟಿಷರು ಬಿ) ಫ್ರೆಂಚರು ಸಿ) ಪೋರ್ಚುಗೀಸರು ಡಿ) ಆಟೋಮನ್ ಟರ್ಕರು

3. ಏಷ್ಯಾ ಮತ್ತು ಯೂರೋಪ್ ನಡುವಿನವ್ಯಾಪಾರ ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು, ಆದಕಾರಣ ಇದನ್ನು

ಎ) ಭಾರತದ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯಲಾಗಿದ

ಬಿ) ಏಷ್ಯಾದ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯಲಾಗಿದೆ

ಸಿ) ಯುರೋಪಿಯನ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯಲಾಗಿದೆ

ಡಿ) ಅರೇಬಿಯಾದ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯಲಾಗಿದೆ

4. ಫ್ರಾನ್ಸಿಸ್ಕೋ ಡಿ ಆಲ್ಮೇಡಾ ಭಾರತದಲ್ಲಿ 'ನೀಲಿ ನೀರಿನ ನೀತಿ' ಯನ್ನು ಜಾರಿಗೆ ತರಲು ಕಾರಣ..

ಎ) ಬಂದರುಗಳನ್ನು ಅಭಿವೃದ್ಧಿ ಪಡಿಸಲು. ಬಿ) ನೌಕಾ ಶಕ್ತಿಯನ್ನು ಬಲಪಡಿಸಲು.

ಸಿ) ವಿದೇಶಿ ವ್ಯಾಪಾರವನ್ನು ಬಲಪಡಿಸಲು. ಡಿ) ಗೋವಾವನ್ನು ವಶಪಡಿಸಿಕೊಳ್ಳಲು.

### ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು

1. ಕ್ರಿ.ಶ 1498 ರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿದವನು ಯಾರು?
2. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ದಿವಾನಿ ಹಕ್ಕನ್ನು ನೀಡಿದನು ಯಾರು?
3. ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಮೊದಲಿಗರು ಯಾರು?
4. ಪೋರ್ಚುಗೀಸರ ಮೊಟ್ಟ ಮೊದಲ ವೈಸರಾಯ್ ಯಾರು?
5. ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವರು ಯಾರು?
6. ಮೂರು ಕಾರ್ನಾಟಿಕ್ ಯುದ್ಧಗಳು ನಡೆಯಲು ಮುಖ್ಯ ಕಾರಣವೇನು?
7. ಮೊದಲ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
8. ಎರಡನೇ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
9. ಮೂರನೇ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
10. 1760ರಲ್ಲಿ ವಾಂಡಿವಾಷ್ ಕದನ ಯಾರು ಯಾರಿಗೆ ನಡೆಯಿತು?
11. ದಸ್ತಕ್ ಎಂದರೇನು?
12. ಪೋರ್ಚುಗೀಸ್ ಸ್ರಾಮಾಜ್ಯದ ನಿಜವಾದ ಸ್ಥಾಪಕ ಯಾರು?

## ಅಧ್ಯಾಯ 2 ಬ್ರಿಟಿಷ್ ಆಳ್ವಿಕೆ ವಿಸ್ತರಣೆ

### ಬಹು ಆಯ್ಕೆ ಪ್ರಶ್ನೆಗಳು

1. ಪಂಜಾಬಿನ ಮೇಲೆ ಬ್ರಿಟಿಷರ ನೇರ ಆಳ್ವಿಕೆಯನ್ನು ವಿರೋಧಿಸಿ ಲಾಹೋರ್ ನಲ್ಲಿ ನಡೆದ ಹೋರಾಟದ ನೇತೃತ್ವವನ್ನು ವಹಿಸಿದ್ದವನು

   ಎ) ದುಲೀಪ್ ಸಿಂಗ್ ಬಿ)ರಣಜಿತ್ ಸಿಂಗ್ ಸಿ)ಚಟ್ಟಾರ್ ಸಿಂಗ್ ಅಟ್ಟಾರಿವಾಲಾ ಡಿ)ಮೂಲರಾಜ್

2. ಸಾಲ್ಬಾಯ್ ಒಪ್ಪಂದದೊಂದಿಗೆ ಕೊನೆಗೊಂಡ ಯುದ್ಧ

   ಎ) ಎರಡನೇ ಅಂಗ್ಲೋ ಮರಾಠ ಯುದ್ಧ ಬಿ) ಎರಡನೇ ಅಂಗ್ಲೋ ಸಿಖ್ ಯುದ್ಧ

   ಸಿ) ಮೊದಲನೇ ಅಂಗ್ಲೋ ಮರಾಠ ಯುದ್ಧ ಡಿ) ಮೊದಲನೇ ಅಂಗ್ಲೋ ಸಿಖ್ ಯುದ್ಧ

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮೊದಲನೇ ಆಂಗ್ಲೋ ಮರಾಠ ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ಯಾರು?
3. ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?
4. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು?
5. ಎರಡನೇ ಆಂಗ್ಲೋ–ಮರಾಠ ಯುದ್ಧಕ್ಕೆ ಮುಖ್ಯ ಕಾರಣವೇನು?
6. ಎರಡನೇ ಆಂಗ್ಲೋ–ಮರಾಠ ಯುದ್ಧದವನ್ನು ಕೊನೆಗಾಣಿಸಿದ ಒಪ್ಪಂದ ಯಾವುದು?
7. ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು?
8. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡವನು ಯಾರು?
9. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದವರು ಯಾರು??
10. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜೀನಾಮೆ ನೀಡಿ ಇಂಗ್ಲೆಂಡಿಗೆ ಏಕೆ ಹಿಂದಿರುಗಿದನು?

## ಅಧ್ಯಾಯ 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

### ಬಹು ಆಯ್ಕೆ ಪ್ರಶ್ನೆಗಳು

1. ಚಾರ್ಲ್ಸ್ ವುಡ್ ಆಯೋಗ ವರದಿ ಸಲ್ಲಿಸಿದ ವರ್ಷ

   ಎ) 1834 ಬಿ) 1844 ಸಿ) 1854 ಡಿ) 1864

2. ಕಾರ್ನ್ ವಾಲಿಸ್ ನಾಗರಿಕ ಸೇವೆಗೆ ಸೇರುವವರಿಗೆ ಶಿಕ್ಷಣ ನೀಡಲು ಪ್ರಾರಂಭಿಸಿದ ಕಾಲೇಜು

   ಎ) ಸಂತ ಜಾರ್ಜ್ ಪೋರ್ಟ್ ಕಾಲೇಜು ಬಿ) ಪೋರ್ಟ್ ಡೇವಿಡ್ ಕಾಲೇಜು

   ಸಿ) ಅಂಗ್ಲೋ ಆಡಳಿತ ಕಾಲೇಜು ಡಿ) ಪೋರ್ಟ್ ವಿಲಿಯಂ ಕಾಲೇಜು

3. ರೆಗ್ಯುಲೇಟಿಂಗ್ ಕಾಯ್ದೆ ಜಾರಿಯಾದ ವರ್ಷ

   ಎ) 1733 ಬಿ) 1763 ಸಿ) 1783 ಡಿ) 1773

4. ಭಾರತದಲ್ಲಿ ಕ್ರೈಸ್ತ ಧರ್ಮ ಮತ್ತು ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಕ್ರೈಸ್ತ ಮಿಷನರಿಗಳಿಗೆ ಅವಕಾಶ ಮಾಡಿಕೊಟ್ಟ ಕಾಯ್ದೆ

ಎ) 1833ರ ಚಾರ್ಟರ್ ಕಾಯ್ದೆ ಬಿ) 1823ರ ಚಾರ್ಟರ್ ಕಾಯ್ದೆ

ಸಿ) 1813ರ ಚಾರ್ಟರ್ ಕಾಯ್ದೆ ಡಿ) 1858ರ ಚಾರ್ಟರ್ ಕಾಯ್ದೆ

5. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರಿಗೆ ಸ್ಥಾನವನ್ನು ಕಲ್ಪಿಸಿದ ಶಾಸನ

ಎ) 1861ರ ಭಾರತೀಯ ಪರಿಷತ್ಕಾಯ್ದೆ ಬಿ) 1892 ರ ಭಾರತೀಯ ಪರಿಷತ್ಕಾಯ್ದೆ

ಸಿ) 1909ರ ಭಾರತೀಯ ಪರಿಷತ್ಕಾಯ್ದೆ ಡಿ) 1813ರ ಭಾರತೀಯ ಪರಿಷತ್ಕಾಯ್ದೆ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ದಿವಾನಿ ಅದಾಲತ್ ಮತ್ತು ಫೌಜದಾರಿ ಅದಾಲತ್ ಎಂಬ ನ್ಯಾಯಾಲಯಗಳನ್ನು ಸ್ಥಾಪಿಸಿದವನು ಯಾರು?
2. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ದತಿ ಯಾವುದು?
3. ಆಧುನಿಕ ಶಿಕಣ್ಣ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಯಾರು
4. ಬ್ರಿಟಿಷ್ ಭೂಕಂದಾಯ ನೀತಿಗಳಿಂದ ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು. ಎಂದು ಹೇಳಿದವರು ಯಾರು?
5. ರೈತವಾರಿ ಪದ್ಧತಿಯನ್ನು ಮೊದಲಿಗೆ ಬಾರಾಮಹಲ್ ಪ್ರಾಂತ್ಯದಲ್ಲಿ ಪ್ರಯೋಗಿಸಿದವನು ಯಾರು
6. ರೈತವಾರಿ ಪದ್ಧತಿಯನ್ನು ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಯಾರು?
7. ಮಹಲ್ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು?
8. ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು?
9. ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು?
10. ಖಾಯಂ ಜಮೀನ್ದಾರಿ ಪದ್ಧತಿ ಜಾರಿಗೊಳಿಸಿದವರು ಯಾರು?
11. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಸದಸ್ಯನನ್ನಾಗಿ ಯಾರು ನೇಮಕವಾದರು?
12. ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು?
13. ಮುಸ್ಲಿಂರಿಗೆ ಪ್ರತ್ಯೇಕ ರಾಜಕಿಯ ಪ್ರಾತಿನಿಧ್ಯ ನೀಡುವ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ಮಾಡಿದ ಕಾಯ್ದೆ ಯಾವುದು?
14. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಕಾಯ್ದೆ ಯಾವುದು?
15. ಕಲ್ಕತ್ತದಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಕಾಯ್ದೆ ಯಾವುದು?

## ಆಧ್ಯಾಯ: 4. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು ಹಾಗೂ ಮೈಸೂರಿನ ಒಡೆಯರು

### ಬಹು ಆಯ್ಕೆ ಪ್ರಶ್ನೆಗಳು

1. ಮೊದಲನೇ ಅಂಗ್ಲೋ–ಮೈಸೂರು ಯುದ್ಧವು ಕೊನೆಗೊಳ್ಳಲು ಕಾರಣವಾದ ಒಪ್ಪಂದ

ಎ) ಸಾಲ್ಬಾಯ್ ಬಿ) ಮದ್ರಾಸ್ ಸಿ) ಮಂಗಳೂರು ಡಿ) ಶ್ರೀರಂಗಪಟ್ಟಣ

2. 1800ರಲ್ಲಿ ಅಂಗ್ಲರ ವಿರುದ್ಧ ಬಿದನೂರು ಮತ್ತು ಶಿಕಾರಿಪುರದಲ್ಲಿ ದಂಗೆ ಎದ್ದವರು

ಎ) ಹೈದರಾಲಿ ಬಿ) ದೋಂಡಿಯಾ ವಾಘ್ ಸಿ) ಚೆನ್ನಮ್ಮ ಡಿ) ಸಂಗೊಳ್ಳಿ ರಾಯಣ್ಣ

3. ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು ಈ ಯುದ್ಧಕ್ಕೆ ಕಾರಣವಾಯಿತು

ಎ) ಎರಡನೆಯ ಅಂಗ್ಲೋ ಮೈಸೂರು ಯುದ್ಧ ಬಿ) ಮೊದಲನೆಯ ಅಂಗ್ಲೋ ಮೈಸೂರು ಯುದ್ಧ

4. ಟಿಪ್ಪು ಯುದ್ಧ ನಷ್ಟ ಭರ್ತಿಗೆ ಗ್ಯಾರಂಟಿಗಾಗಿ ತನ್ನ ಇಬ್ಬರು ಮಕ್ಕಳನ್ನು ಬ್ರಿಟಿಷರಿಗೆ ಒತ್ತೆಯಿಟ್ಟ ಒಪ್ಪಂದ

ಎ) ಶ್ರೀರಂಗಪಟ್ಟಣ ಬಿ) ಮದ್ರಾಸ್ ಸಿ) ಮಂಗಳೂರು ಡಿ) ಬೆಂಗಳೂರು

5. ಸುರಪುರದ ಮೇಲೆ ಬ್ರಿಟಿಷ್ ಆಕ್ರಮಣಕ್ಕೆ ಕಾರಣವೇನೆಂದರೆ, ಸುರಪುರದ ರಾಜನು

ಎ) ಶಸ್ತ್ರಾಸ್ತ್ರ ಕಾಯ್ದೆಯನ್ನು ವಿರೋಧಿಸಿದನು

ಬಿ) ನಾನಾಸಾಹೇಬನ ಪ್ರತಿನಿಧಿಗಳಿಗೆ ಆಶ್ರಯ ನೀಡಿದ್ದನು

ಸಿ) ದತ್ತು ಮಕ್ಕಳಿಗೆ ಹಕ್ಕಿಲ್ಲ ಕಾಯ್ದೆಯನ್ನು ವಿರೋಧಿಸಿದನು

ಡಿ) ಸಹಾಯಕ ಸೈನ್ಯ ಪದ್ಧತಿಯನ್ನು ವಿರೋಧಿಸಿದನು

6. ಎರಡನೇ ಆಂಗ್ಲೋ–ಮೈಸೂರು ಯುದ್ಧವನ್ನು ಕೊನೆಗಾಣಿಸಿದ ಒಪ್ಪಂದವು

ಎ) ಮಂಗಳೂರು ಬಿ) ಮದ್ರಾಸ್ ಸಿ) ಶ್ರೀರಂಗಪಟ್ಟಣ ಡಿ) ಸಾಲ್ಬಾಯ್

7. ಮೂರನೇ ಅಂಗ್ಲೋ–ಮೈಸೂರು ಯುದ್ಧವು ಕೊನೆಗೊಳ್ಳಲು ಕಾರಣವಾದ ಒಪ್ಪಂದ

ಎ) ಶ್ರೀರಂಗಪಟ್ಟಣ ಬಿ) ಸಾಲ್ಬಾಯ್ ಸಿ) ಮಂಗಳೂರು ಡಿ) ಮದ್ರಾಸ್

8. ಬೆಂಗಳೂರು–ಮೈಸೂರು ರೈಲು ಮಾರ್ಗ ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ

ಎ) ಹತ್ತನೆಯ ಜಯಚಾಮರಾಜೇಂದ್ರ ಒಡೆಯರು ಬಿ) ಚಿಕ್ಕದೇವರಾಜ ಒಡೆಯರು

ಸಿ) ನಾಲ್ವಡಿ ಕೃಷ್ಣರಾಜ ಒಡೆಯರು ಡಿ) ಜಯಚಾಮರಾಜ ಒಡೆಯರು

9. ಕೊಪ್ಪಳದಲ್ಲಿ ಬ್ರಿಟಿಷರ ವಿರುದ್ದ ಸಶಸ್ತ್ರ ಬಂಡಾಯ ನಡೆಸಿದ ಹೋರಾಟಗಾರ

ಎ) ವೆಂಕಟಪ್ಪ ನಾಯಕ ಬಿ) ವೀರಪ್ಪ

ಸಿ) ದೋಂಡಿಯಾ ವಾಘ್ ಡಿ) ಸಂಗೊಳ್ಳಿ ರಾಯಣ್ಣ

10. ಕೊಡಗಿನಲ್ಲಿ ಬ್ರಿಟಿಷರ ವಿರುದ್ಧ ರಾಜಕೀಯ ಅಸಮಾಧಾನ ಸೃಷ್ಟಿಯಾಗಲು ಪ್ರಮುಖ ಕಾರಣ

ಎ) ರಾಜ ಚಿಕ್ಕವೀರರಾಜೇಂದ್ರನ ಪದಚ್ಯುತಿ ಬಿ) ಸ್ವಾಮಿ ಅಪರಾಂಪರ ಬಂಧನ

ಸಿ) ಪುಟ್ಟ ಬಸಪ್ಪನನ್ನು ಗಲ್ಲಿಗೇರಿಸಿದ್ದು ಡಿ) ಬಂಡುಕೋರರ ಸರ್ಕಾರ ಸ್ಥಾಪನೆಯಾದದ್ದು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣವೇನು?

2 ಮೂರನೇ ಆಂಗ್ಲೋ–ಮೈಸೂರು ಯುದ್ದಕ್ಕೆ ಕಾರಣವೇನು?

3 ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು ರಾಜಕೀಯ ಸಮಸ್ಯೆಗಳ ಶತಮಾನ ಎಂದು ಚಿತ್ರಿಸಲು ಕಾರಣವೇನು?

4. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡೆದೆದ್ದರು?

5. ಬ್ರಿಟಿಷರು ಕಿತ್ತೂರು ಚೆನ್ನಮ್ಮಳನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಏಕೆ ಸ್ಥಳಾಂತರಿಸಿದರು?

6. 'ಅಭಿನವ ಕಾಳಿದಾಸ ಎಂದು ಪ್ರಸಿದ್ಧರಾದವರು ಯಾರು?

7. ಅಮರ ಸುಳ್ಯ ಮುಲತಃ ಯಾರ ಬಂಡಾಯವಾಗಿತ್ತು?

8. ಮೈಸೂರಿನ ನವರಾತ್ರಿ ಉತ್ಸವವನ್ನು ಆರಂಭಿಸಿದವರು ಯಾರು?

9. ಕರ್ನಾಟಕ ಕವಿಚಕ್ರವರ್ತಿ ಮತ್ತು ನವಕೋಟಿ ನಾರಾಯಣ ಬಿರುದು ಹೊಂದಿದ್ದವರು ಯಾರು?

10. ಮಹಾತ್ಮ ಗಾಂಧಿಯವರು ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿ ಎಂದು ಕರೆಯಲು ಕಾರಣವೇನು?

## ಅಧ್ಯಾಯ 5 ಸಾಮಾಜಿ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

## ಬಹು ಆಯ್ಕೆ ಪ್ರಶ್ನೆಗಳು

1. ರಾಮಕೃಷ್ಣ ಮಿಷನ್‌ನ ಸ್ಥಾಪಕರು

ಎ) ಸ್ವಾಮಿ ವಿವೇಕಾನಂದ   ಬಿ) ಆನಿಬೆಸೆಂಟ್

ಸಿ) ಜ್ಯೋತಿಭಾ ಫುಲೆ   ಡಿ) ರಾಜಾರಾಮ್ ಮೋಹನ್ ರಾಯ್

2. ಸತ್ಯಾರ್ಥ ಪ್ರಕಾಶ : ದಯಾನಂದ ಸರಸ್ವತಿ :: ಗುಲಾಮಗಿರಿ : ____________

ಎ) ಡಾ. ಬಿ.ಆರ್.ಅಂಬೇಡ್ಕರ್   ಬಿ) ಅನಿಬೆಸೆಂಟ್

ಸಿ) ರಾಜಾರಾಮ್ ಮೋಹನರಾಯ್   ಡಿ) ಜ್ಯೋತಿಬಾ ಫುಲೆ

3. ಬ್ರಹ್ಮಸಮಾಜದ ಸ್ಥಾಪಕರು

ಎ) ದಯಾನಂದ ಸರಸ್ವತಿ   ಬಿ) ಆತ್ಮಾರಾಮ ಪಾಂಡುರಂಗ

ಸಿ) ಜ್ಯೋತಿಬಾ ಫುಲೆ   ಡಿ) ರಾಜಾರಾಮ ಮೋಹನರಾಯ್

5. ಆರ್ಯಸಮಾಜದ ಸ್ಥಾಪಕರು

ಎ) ದಯಾನಂದ ಸರಸ್ವತಿ   ಬಿ) ಆತ್ಮಾರಾಮ ಪಾಂಡುರಂಗ

ಸಿ) ಜ್ಯೋತಿಬಾ ಫುಲೆ   ಡಿ) ರಾಜಾರಾಮ ಮೋಹನರಾಯ್

6. ಪ್ರಾರ್ಥನಾ ಸಮಾಜದ ಸ್ಥಾಪಕರು

ಎ) ದಯಾನಂದ ಸರಸ್ವತಿ   ಬಿ) ಆತ್ಮಾರಾಮ ಪಾಂಡುರಂಗ

ಸಿ) ಜ್ಯೋತಿಬಾ ಫುಲೆ   ಡಿ) ರಾಜಾರಾಮ ಮೋಹನರಾಯ್

7. ಸತ್ಯಶೋಧಕ ಸಮಾಜದ ಸ್ಥಾಪಕರು

ಎ) ಜ್ಯೋತಿ ಭಾ ಫುಲೆ   ಬಿ) ಸ್ವಾಮಿ ವಿವೇಕಾನಂದ

ಸಿ) ನಾರಾಯಣಗುರು   ಡಿ) ಜ್ಯೋತಿಬಾ ಫುಲೆ

8. ಸರ್ ಸೈಯದ್ ಅಹ್ಮದ್ ಖಾನ್ ರೂಪಿಸಿದ ಚಳವಳಿ

ಎ) ಆಲಿಘರ್ ಚಳವಳಿ   ಬಿ) ಮಹಮದನ್ ಲಿಬರ್ಟಿ ಚಳವಳಿ

ಸಿ) ಒರಿಯಂಟಲ್ ಚಳವಳಿ   ಡಿ) ಇಸ್ಲಾಂ ಚಳವಳಿ

9. ಥಿಯೋಸಾಫಿಕಲ್ ಸೊಸೈಟಿಯ ಸ್ಥಾಪಕರು

ಎ) ಅನಿಬೆಸೆಂಟ್ ಮತ್ತು ಬಾಲಗಂಗಾಧರ ತಿಲಕರು

ಬಿ) ಕರ್ನಲ್ ಎಚ್.ಎಸ್. ಅಲ್ಕಾಟ್ ಮತ್ತು ಮೇಡಂ ಬ್ಲಾವಟ್ ಸ್ಕೆ

ಸಿ) ಮೇಡಂ ಬ್ಲಾವಟ್ ಸ್ಕೆ ಮತ್ತು ಮಹಾದೇವ ರಾನಡೆ

ಡಿ) ಕರ್ನಲ್ ಎಚ್.ಎಸ್. ಅಲ್ಕಾಟ್ ಮತ್ತು ಚಂದಾವರ್ಕರ್

10. ಬ್ರಹ್ಮವಿದ್ಯಾ ಸಮಾಜದ ಇನ್ನೊಂದು ಹೆಸರು

ಎ) ಆರ್ಯಸಮಾಜ **ಬಿ)** ಥಿಯಾಸಾಫಿಕಲ್ ಸೂಸೈಟಿ ಸಿ) ಪ್ರಾರ್ಥನಾ ಸಮಾಜ **ಡಿ)** ಬ್ರಹ್ಮಸಮಾಜ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ವೇದಗಳಿಗೆ ಹಿಂದಿರುಗಿ ಎಂದು ಕರೆ ಕೊಟ್ಟವರು ಯಾರು?
2. ರಾಮಕೃಷ್ಣ ಮಠ(ಮಿಷನ್)ವನ್ನು ಏಕೆ ಸ್ಥಾಪಿಸಲಾಯಿತು?
3. ಧರ್ಮ ಪರಿಪಾಲನಾ ಯೋಗಂ ಸಂಸ್ಥೆಯನ್ನು ಸ್ಥಾಪಿಸಿದವರು ಯಾರು?
4. 19ನೆಯ ಶತಮಾನವನ್ನು ಎಂತಹ ಕಾಲವೆಂದು ಕರೆಯಲಾಗಿದೆ?
5. ರಾಮ್ ಮೋಹನರಾಯರವರು ಪ್ರಾರಂಭಿಸಿದ ಪತ್ರಿಕೆ ಯಾವುದು?
6. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು ಯಾರು?
7. ಸಮಾಜದ ವ್ಯವಸ್ಥೆಯ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯವನ್ನು ಪ್ರತಿಪಾದಿಸಿದವರು ಯಾರು?
8. ಭಾರತೀಯರಿಗೆ ಭಾರತ ಘೋಷಣೆಯನ್ನು ನೀಡಿದವರು ಯಾರು?
9. ಸ್ವಾಮಿ ದಯಾನಂದ ಸರಸ್ವತಿಯವರು ಆರಂಭಿಸಿದ ಚಳವಳಿ ಯಾವುದು?
10. ಸರ್ ಸೈಯದ್ ಅಹ್ಮದ್ ಖಾನ್‌ರು ಅಂಗ್ಲೋ- ಓರಿಯಂಟ್ ಕಾಲೇಜುನ್ನು ಸ್ಥಾಪಿಸಲು ಕಾರಣವೇನು?
11. ಆನಿಬೆಸೆಂಟರು ಪ್ರಾಂಭಿಸಿದ ಪತ್ರಿಕೆ ಯಾವುದು?
12. ವೇದಗಳು ಸತ್ಯ ಮತ್ತು ಜ್ಞಾನದ ಮೂಲ ಎಂದು ತಿಳಿಸಿದ ಸಮಾಜ ಸುಧಾರಕರು ಯಾರು?
13. ರಾಜಾರಾಂ ಮೋಹನ್ ರಾಯರ ಸತಿ ಪದ್ಧತಿ ವಿರೋಧಿ ಹೋರಾಟವನ್ನು ವಿಲಿಯಂ ಬೆಂಟಿಕ್ ಹೇಗೆ ಬೆಂಬಲಿಸಿದನು?
14. ಭಾರತೀಯ ನವೋದಯದ ಜನಕ ಎಂದು ಯಾರನ್ನು ಕರೆಯುತ್ತಾರೆ?

**ಅಧ್ಯಾಯ 7 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ**

**ಬಹು ಆಯ್ಕೆ ಪ್ರಶ್ನೆಗಳು**

**1.** ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಯು ವಶಪಡಿಸಿಕೊಂಡ ಪ್ರದೇಶ

ಎ) ಕಾನ್ಪುರ್ ಬಿ) ಗ್ವಾಲಿಯರ್ ಸಿ) ಮೀರತ್ ಡಿ) ಲಕ್ನೋ

2. ಇನಾಂ ಆಯೋಗ ನೇಮಿಸಿದ ಉದ್ದೇಶ

ಎ) ರೈತರ ಸಮಸ್ಯೆ ಪರಿಹರಿಸಲು ಬಿ) ಇನಾಂ ಭೂಮಿಯನ್ನು ಹಿಂಪಡೆಯಲು

ಸಿ) ಜಮೀನ್ದಾರರ ಶೋಷಣೆ ತಡೆಯಲು ಡಿ) ಭಾರತೀಯರ ವಿಶ್ವಾಸ ಗಳಿಸಲು

3. 1857ರ ದಂಗೆಗೆ ಇದು ರಾಜಕೀಯ ಕಾರಣವಾಗಿದೆ

ಎ) ಇನಾಂ ಆಯೋಗದ ನೇಮಕ ಬಿ) ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ

ಸಿ) ಕೈಗಾರಿಕಾ ಕ್ರಾಂತಿ ಡಿ) ದ್ವಿ ಪ್ರಭುತ್ವ ಜಾರಿ

11. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ತಕ್ಷಣದ ಕಾರಣ

ಎ) ರಣರಂಗದಲ್ಲಿ ಝಾನ್ಸಿ ರಾಣಿಲಕ್ಷ್ಮಿಬಾಯಿನ್ನು ಕೊಂದದ್ದು

ಬಿ) ತಾತ್ಯಟೋಪಿಯನ್ನು ಸೆರೆಹಿಡಿದದ್ದು

ಸಿ) ಎನ್‌ಫೀಲ್ಡ್ ಬಂದೂಕುಗಳಿಗೆ ದನದ ಮತ್ತು ಹಂದಿ ಕೊಬ್ಬು ಸವರಿದ್ದಾರೆಂಬ ವಂದತಿ

ಡಿ) ಕಾನ್ಪುರವನ್ನು ನಾನಾಸಾಹೇಬ ವಶಪಡಿಸಿಕೊಂಡಿದ್ದು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ಯಾರು?
2. 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದಿದ್ದಾರೆ?
3. 1857ರ ದಂಗೆಯ ಸಮಯದಲ್ಲಿ ಕಾನ್ಪುರದಲ್ಲಿ ದಂಗೆಯ ನೇತೃತ್ವವನ್ನು ವಹಿಸಿದವರು ಯಾರು?
4. 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತದ ಚಕ್ರವರ್ತಿ ಎಂದು ಘೋಷಿಸಲ್ಪಟ್ಟ ಮೊಘಲ್ ದೊರೆ ಯಾರು?

## ಆಧ್ಯಾಯ 7 ಸ್ವಾತಂತ್ರ್ಯ ಹೋರಾಟ

### ಬಹು ಆಯ್ಕೆಯ ಪ್ರಶ್ನೆಗಳು

1. ಕರ್ಜನ್ ಬಂಗಾಳವನ್ನು ವಿಭಜಿಸಲು ಕಾರಣ

ಎ) ಉತ್ತಮ ಆಡಳಿತ ನೀಡಲು ಬಿ) ಬ್ರಿಟಿಷ್ ವಿರೋಧಿ ಭಾವನೆ ಹತ್ತಿಕ್ಕಲು

ಸಿ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ್ನು ವಿರೋಧಿಸಲು ಡಿ) ತೀವ್ರವಾದಿಗಳಿಗೆ ಪ್ರೋತ್ಸಾಹ ನೀಡಲು

2. ಜವಾಹರಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಷ್ ರವರು ಸ್ಥಾಪಿಸಿದ ಪಕ್ಷ

ಎ) ಕಮ್ಯೂನಿಷ್ಟ್ ಬಿ) ಸ್ವರಾಜ್ ಸಿ) ಕಾಂಗ್ರೆಸ್ ಸಮಾಜವಾದಿ ಡಿ) ಫಾರ್ವಡ್ ಬ್ಲಾಕ್

3. ಈ ಘಟನೆಯ ನಂತರ ಗಾಂಧೀಜಿಯವರು ಅಸಹಕಾರ ಚಳವವಳಿಯನ್ನು ಹಿಂದಕ್ಕೆ ಪಡೆದರು

ಎ) ಜಲಿಯನ್ ವಾಲಾಭಾಗ ಬಿ) ಚೌರಿ– ಚೌರ ಸಿ) ದಂಡಿ ಡಿ) ಬಾಂಬೆ

4. ಎಂ.ಜಿ. ರಾನಡೆ ಮತ್ತು ಸುರೇಂದ್ರನಾಥ ಬ್ಯಾನರ್ಜಿ ಈ ಗುಂಪಿನ ನಾಯಕರು

ಎ) ಕ್ರಾಂತಿಕಾರಿಗಳು ಬಿ) ಮಂದಗಾಮಿಗಳು ಸಿ) ತೀವ್ರವಾದಿಗಳು ಡಿ) ರಾಷ್ಟ್ರೀಯವಾದಿಗಳು

5. ಆಲಿ ಸಹೋದರರು ಆರಂಭಿಸಿದ ಚಳವಳಿ

ಎ) ಅಹಿಂಸಾ ಬಿ) ಸ್ವರಾಜ್ಯ ಸಿ) ಖಿಲಾಫತ್ ಡಿ) ಅಸಹಕಾರ

6. ಕ್ವಿಟ್ ಇಂಡಿಯ ಚಳವಳಿಯ ಸಂದರ್ಭದಲ್ಲಿ ಗಾಂಧೀಜಿಯವರು ಜನರಿಗೆ ನೀಡಿದ ಕರೆ

ಎ) ಭಾರತವನ್ನು ಉಳಿಸಿ ಬಿ) ಮಾಡು ಇಲ್ಲವೇ ಮಡಿ ಸಿ) ಸರ್ವರ ಸ್ವಾತಂತ್ರ್ಯ ಡಿ) ದೆಹಲಿ ಚಲೋ

7. ದಂಡಿ ಉಪ್ಪಿನ ಸತ್ಯಾಗ್ರಹ ಈ ಚಳವಳಿಯ ಭಾಗವಾಗಿತ್ತು

ಎ) ಅಸಹಕಾರ ಬಿ) ನಾಗರಿಕ ಕಾಯ್ದೆ ಭಂಗ ಸಿ) ಕ್ವಿಟ್ ಇಂಡಿಯ ಡಿ) ಖಿಲಾಫತ್

8. 'ಮಹಾದ್ ಕೆರೆ ಮತ್ತು ಕಾಲಾರಂ ದೇವಾಲಯದ ಆಂದೋಲನಗಳು' ಇದನ್ನು ಪ್ರತಿಭಟಿಸಲು ಆಯೋಜಿಸಲಾಗಿತ್ತು

ಎ) ಅಸ್ಪೃಶ್ಯತೆಯ ಆಚರಣೆಯನ್ನು ಬಿ) ವೆಲ್ಸ್ ನ ರಾಜಕುಮಾರನ ಭೇಟಿಯನ್ನು

ಸಿ) ಕ್ರಿಪ್ಸ್ ಮಿಷನ್ನ ಪ್ರಸ್ತಾವನೆಯನ್ನು ಡಿ) ಗಾಂಧಿಯನ್ನು ದಂಡಿಯಲ್ಲಿ ಬಂಧಿಸುವುದನ್ನು

9. ಕೆಳಗಿನವುಗಳಲ್ಲಿ ನೀಲಿ ಬೆಳೆಗಾರರ ಹೋರಾಟವಾಗಿರುವುದು

ಎ) ಅಹ್ಮದಾಬಾದ್ ಚಳವಳಿ ಬಿ) ಚಂಪಾರಣ ಚಳವಳಿ

ಸಿ) ಖಿಲಾಫತ್ ಚಳವಳಿ ಡಿ) ಖೇಡಾ ಚಳವಳಿ

10. ಕ್ವಿಟ್ ಇಂಡಿಯಾ ಚಳವಳಿಯ ಕಾಂಗ್ರೇಸ್ಸೇತರ ನಾಯಕರಿಗೆ ನಾಯಕತ್ವವನ್ನು ನೀಡಿತು .ಈ ಕೆಳಗಿನವರಲ್ಲಿ ಕಾಂಗ್ರೇಸ್ಸೇತರ ನಾಯಕರನ್ನು ಗುರುತಿಸಿ.

ಎ) ಕಸ್ತೂರ ಬಾ .ಬಿ) ಡಾ.ಬಿ.ಆರ್.ಅಂಬೇಡ್ಕರ್.

ಸಿ) ಜಯಪ್ರಕಾಶ್ ನಾರಾಯಣ ಡಿ)ಅಬ್ದುಲ್ಕಲಾಂ ಅಜಾದ್

11. 1938ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು

ಎ) ಸರ್ದಾರ್ ವಲ್ಲಭಭಾಯಿ ಪಟೇಲ್ ಬಿ) ಡಾ.ಬಿ.ಆರ್.ಅಂಬೇಡ್ಕರ್

ಸಿ) ಬಾಲಗಂಗಾಧರ ತಿಲಕ್ ಡಿ) ಸುಭಾಷ್ ಚಂದ್ರಬೋಸ್

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಗುರುತಿಸಿ**

1. ಭಾರತ ರಾಷ್ಟೀಯ ಕಾಂಗ್ರೆಸ್ನ ಮೊದಲ ಅಧ್ಯಕ್ಷರು ಯಾರು?
2. ಫಾರ್ವಡ್ ಬ್ಲಾಕ್' ಅನ್ನು ಸ್ಥಾಪಿಸಿದವರು ಯಾರು?
3. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ಯಾವ ವರ್ಷ ಸ್ಥಾಪಿಸಲಾಯಿತು?
4. ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು ಯಾರು?
5. ಭಾರತದಲ್ಲಿದ್ದ ರಹಸ್ಯ ಕ್ರಾಂತಿಕಾರಿ ಸಂಘಟನೆಗಳಾವುವು?
6. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರು ಯಾರು?
7. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು ಯಾರು?
8. ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಎಂದು ಹೇಳಿದವರು ಯಾರು?
9. ಸ್ವರಾಜ್ ಪಕ್ಷ ಸ್ಥಾಪನೆಯಾದ ವರ್ಷ ಯಾವುದು?
10. ಗಾಯಿಡಿನ್ ಲೂಯಿ ಹರಕ್ಕಾ ಸಂಸ್ಥೆಯನ್ನು ಕಟ್ಟಲು ಕಾರಣವೇನು?

**ಆಧ್ಯಾಯ 8 – ಸ್ವಾತಂತ್ರೋತ್ತರ ಭಾರತ**

1. ಅಗಸ್ಟ್ 15, 1947, ಇಡೀ ಭಾರತವೇ ಸ್ವಾತಂತ್ರ್ಯವನ್ನು ಆಚರಿಸುತ್ತಿದ್ದರೆ ಗಾಂಧೀಜಿಯವರು ಇದದ್ದು

ಎ) ಲಾಹೋರ್ ಬಿ) ನೌಕಾಲಿ ಸಿ) ದೆಹಲಿ ಡಿ) ಅಮೃತಸರ

2. ಸರ್ದಾರ್ ವಲ್ಲಬಭಾಯಿ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯಲು ಕಾರಣ

ಎ) ಭಾರತದ ವಿದೇಶಾಂಗ ನೀತಿಯನ್ನು ರೂಪಿಸಿದ್ದರಿಂದ

ಬಿ) ದೇಶಿಯ ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ವಿಲೀನಿಕರಣ ಮಾಡಿದ್ದರಿಂದ

ಸಿ) ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರಿಂದ

ಡಿ) ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದ್ದರಿಂದ

3. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದ ವರ್ಷ

ಎ) 1956 ಬಿ) 1953 ಸಿ) 1950 ಡಿ) 1951

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಸಂವಿಧಾನದ 42ನೇ ತಿದ್ದುಪಡಿ ವಿಶೇಷವಾದ್ದು ಏಕೆ?

2. ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯುತ್ತಾರೆ?

3. ಪಾಂಡಿಚೇರಿಯು ಎಷ್ಟರಲ್ಲಿ ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು?

4. ಗೋವಾ ವಿಮೋಚನೆಗೊಂಡ ವರ್ಷ ಯಾವುದು?

4. ಆಂಧ್ರ ಪ್ರದೇಶದ ರಚನೆಗಾಗಿ ಉಪವಾಸ ಸತ್ಯಾಗ್ರಹ ನಡೆಸಿ ಮರಣ ಹೊಂದಿದವರು ಯಾರು?

5. ಭಾರತದಲ್ಲಿ ರಚನೆಯಾದ ಮೊದಲ ಭಾಷಾವಾರು ರಾಜ್ಯ ಯಾವುದು?

6. ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿದ್ದು ಎಷ್ಟರಲ್ಲಿ?

7. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ ಯಾವುದು?

8. ರಾಜ್ಯ ಪುನರ್ವಿಂಗಡನಾ ಆಯೋಗದ ಅಧ್ಯಕ್ಷರು ಯಾರಾಗಿದ್ದರು?

9. ಪಾಂಡಿಚೇರಿ ಭಾರತಕ್ಕೆ ಯಾವಾಗ ಸೇರ್ಪಡೆಗೊಂಡಿತು?

10. ಜುನಾಗಡದ ಪ್ರಜೆಗಳು ನವಾಬನ ವಿರುದ್ಧ ದಂಗೆ ಎದ್ದರು ಏಕೆ

**ಆಧ್ಯಾಯ 9 ಮಹಾಯುದ್ಧಗಳು ಹಾಗೂ ಭಾರತದ ಪಾತ್ರ**

**ಬಹುಆಯ್ಕೆ ಪ್ರಶ್ನೆಗಳು**

1. ನಾಜಿ ಪಕ್ಷದ ಸ್ಥಾಪಕರು

ಎ) ಮುಸೋಲಿನಿ ಬಿ) ಸ್ಟಾಲಿನ್ ಸಿ) ಹಿಟ್ಲರ್ ಡಿ) ಗೊಬೆಲ್ಸ್

2. ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷದ ಸ್ಥಾಪಕರು

ಎ) ಹಿಟ್ಲರ್ ಬಿ) ಗೊಬೆಲ್ಸ್ ಸಿ) ಸ್ಟಾಲಿನ್ ಡಿ) ಮುಸೋಲಿನಿ

**3**. ವರ್ಸೇಲ್ಸ್ ಒಪ್ಪಂದ ಏರ್ಪಟ್ಟ ವರ್ಷ.

ಎ) 1919 ಬಿ) 1909 ಸಿ) 1929 ಡಿ) 1939

4. ತೀನ್ ಮೂರ್ತಿ ಚೌಕ ಇರುವ ಸ್ಥಳ

ಎ) ಕೋಲ್ಕತ್ತ ಬಿ) ದೆಹಲಿ ಸಿ) ಚೆನ್ನೈ ಡಿ) ಮುಂಬೈ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಕದನ ಬಾಂಧವ್ಯತ್ರಯ ರಾಷ್ಟ್ರಗಳಾವುವು?
2. ಕದನ ಸೌಹಾರ್ದತ್ರಯ ರಾಷ್ಟ್ರಗಳಾವುವು?
3. ಹೊಲೊಕಾಸ್ಟ್ ಎಂದರೇನು?
4. ಆಕ್ಸೀಸ್(Axis) ಬಣದಲ್ಲಿದ್ದ ರಾಷ್ಟ್ರಗಳಾವುವು?
5. ಆಲೀಸ್(Allies) (ಅಲ್ಲೈಸ್) ಬಣದಲ್ಲಿದ್ದ ರಾಷ್ಟ್ರಗಳಾವುವು?
6. ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು
7. ರಷ್ಯಾವು ಮೊದಲನೇ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣವೇನು?
8. 1930ರ ದಶಕದಲ್ಲಿ ಮಹಾನ್ ಆರ್ಥಿಕ ಕುಸಿತ ಉಂಟಾಗಲು ಕಾರಣವೇನು?
9. ಬೂದುಅಂಗಿ ದಳ ಎಂಬ ಕೌರ್ಯಪಡೆಯನ್ನು ಸ್ಥಾಪಿಸಿದವರು ಯಾರು?
10. ಎರಡನೆಯ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?
11. ಕಾನ್ಸೆಂಟ್ರೇಷನ್ ಕ್ಯಾಂಪ್ಸ್ ಎಂದರೇನು?
12. 2018ರಲ್ಲಿ ತೀನ್ ಮೂರ್ತಿ ಚೌಕವನ್ನು ಏನೆಂದು ಮರುನಾಮಕರಣ ಮಾಡಲಾಯಿತು?

**ರಾಜ್ಯಶಾಸ್ತ್ರ**

**ಆಧ್ಯಾಯ 1 ಭಾರತಕ್ಕಿರುವ ಸವಾಲುಗಳೂ ಹಾಗೂ ಅವುಗಳ ಪರಿಹಾರೋಪಾಯಗಳು**

**ಬಹು ಆಯ್ಕೆ ಪ್ರಶ್ನೆಗಳು**

1. ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನ ನೀಡುವುದು

   ಎ) ಭ್ರಷ್ಟಾಚಾರ ಬಿ) ಕೋಮುವಾದ ಸಿ) ಪ್ರಾದೇಶಿಕತೆ ಡಿ) ತಾರತಮ್ಯ

2. ಧರ್ಮದ ಆಧಾರದ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲಿಯೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದು

   ಎ) ಕೋಮುವಾದ ಬಿ) ಪ್ರಾದೇಶಿಕತೆ ಸಿ) ತಾರತಮ್ಯ ಡಿ) ಜಾತ್ಯತೀತತೆ

3. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ನೇಮಿಸಲ್ಪಟ್ಟ ಸಮಿತಿ

   ಎ) ಡಿ.ಎಂ ನಂಜುಡಪ್ಪ ಬಿ) ಎಂ.ಡಿ. ನಂಜುಂಡಸ್ವಾಮಿ ಸಿ) ನಿಜಲಿಂಗಪ್ಪ ಡಿ) ಎಸ್. ರುದ್ರಪ್ಪ

4. ಕರ್ನಾಟಕ ಸರ್ಕಾರ ಸ್ತ್ರೀಶಕ್ತಿ ಸಂಘಗಳನ್ನು ಸ್ಥಾಪಿಸಿದ ಮುಖ್ಯ ಉದ್ದೇಶ

   ಎ) ರಾಜಕೀಯ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು

   ಬಿ) ಮಹಿಳೆಯರ ದೂರು-ದುಮ್ಮಾನಗಳನ್ನು ಆಲಿಸಲು

   ಸಿ) ರಾಷ್ಟ್ರ ಮತ್ತು ರಾಜ್ಯ ಮಹಿಳಾ ಆಯೋಗಗಳನ್ನು ಚಿಸಲು

   ಡಿ) ಗ್ರಾಮೀಣ ಮಹಿಳೆಯರ ವಿಕಾಸಕ್ಕಾಗಿ

5. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನು ರಚಿಸಿದ ಉದ್ದೇಶ

ಎ) ಮಹಿಳೆಯರ ಸ್ವ-ಉದ್ಯೋಗಕ್ಕೆ ಸಾಲ ಸೌಲಭ್ಯ ನೀಡಲು

ಬಿ) ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯ ಮೀಸಲಾತಿ ಕಲ್ಪಿಸಲು

ಸಿ) ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸುಧಾರಣೆ ತರಲು

ಡಿ) ಮಹಿಳೆಯರ ದೂರು-ದುಮ್ಮಾನಗಳನ್ನು ಆಲಿಸಿ ಪರಿಶೀಲಿಸಿ ನ್ಯಾಯ ಒದಗಿಸಲು

6 ಶಿಕ್ಷಣ ಹಕ್ಕು ಕಾಯ್ದೆ ಜಾರಿಯಾದ ವರ್ಷ

ಎ) 2008 ಬಿ) 2006 ಸಿ) 2007 ಡಿ) 2009

7. ರಾಷ್ಟ್ರೀಯ ಸಾಕ್ಷರತಾ ಮಿಷಲ್ ಸ್ಥಾಪನೆಯಾದ ವರ್ಷ

ಎ) 1986 ಬಿ) 1988 ಸಿ) 1987 ಡಿ) 1985

8. ಲೋಕಾಪಾಲ ಸಂಸ್ಥೆ ಸ್ಥಾಪನೆಯ ಮುಖ್ಯ ಉದ್ದೇಶ

ಎ) ಪ್ರಾದೇಶಿಕ ಅಸಮತೋಲನವನ್ನು ತೆಗೆದುಹಾಕುವುದು ಬಿ) ಭ್ರಷ್ಟಚಾರದ ವಿರುದ್ದ ಹೋರಾಡುವದು

ಸಿ) ಕೋಮುವಾದ ನಿರ್ಮೂಲನೆ ಮಾಡುವುದು ಡಿ) ಲಿಂಗ ಸಮಾನತೆಯನ್ನು ತರುವುದು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. 2011ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ಎಷ್ಟು?
2. ಸ್ತ್ರೀಶಕ್ತಿ ಕಾರ್ಯಕ್ರಮದ ಉದ್ದೇಶವೇನು?
3. ಭ್ರಷ್ಟಾಚಾರ ನಿಯಂತ್ರಣಕ್ಕೆ ಸ್ಥಾಪಿಸಿರುವ ಸಂಸ್ಥೆಗಳು ಯಾವುವು?
4. ಲಾಭಕೋರತನ ಎಂದರೇನು?
5. ಕಳ್ಳಸಾಗಾಣಿಕೆ ಎಂದರೇನು?
6. ಭಾರತದ ಮೊದಲ ಮಹಿಳಾ ರಾಷ್ಟರಪತಿ ಯಾರು?
7. ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಿರುವ ಸಂವಿಧಾನದ ವಿಧಿ ಯಾವುದು?
8. ಸಾಕ್ಷರ ಭಾರತ ಕಾರ್ಯಕ್ರಮದ ಮುಖ್ಯ ಉದ್ದೇಶವೇನು?
9. 2001 ರಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೊಳಿಸಿದ ಉದ್ದೇಶವೇನು?
10. ಲೋಕಾಯುಕ್ತ ಸಂಸ್ಥೆಯನ್ನು ಏಕೆ ಸ್ಥಾಪಿಸಲಾಯಿತು?
11. 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಸಾಕ್ಷರತೆಯ ಪ್ರಮಾಣ ಎಷ್ಟಿದೆ?

## ಅಧ್ಯಾಯ2 ಅನ್ಯ ರಾಷ್ಟರಗಳೊಂದಿಗೆ ಭಾರತದ ಸಂಬಂಧ

### ಬಹು ಆಯ್ಕೆ ಪ್ರಶ್ನೆಗಳು

1. ಭಾರತದ ಭಿಲಾಯ್ ಮತ್ತು ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಾಯಮಾಡಿದ ರಾಷ್ಟ್ರ

ಎ) ಚೀನಾ ಬಿ) ರಷ್ಯಾ ಸಿ) ಪಾಕಿಸ್ತಾನ ಡಿ) ಅಮೇರಿಕಾ

2. ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧದ ಮೇಲೆ ದುಷ್ಪರಿಣಾಮ ಬೀರಿರುವ ಅಂಶ

ಎ) ಭಾರತದ ಭೂಭಾಗ ಸಿಕ್ಕಿಂ ತನಗೆ ಸೇರಬೇಕೆಂಬ ಚೀನಾದ ವಾದ

ಬಿ) ಭಾರತದ ಭೂಭಾಗ ಅರುಣಚಾಲ ಪ್ರದೇಶ ತನಗೆ ಸೇರಬೇಕೆಂಬ ಚೀನಾದ ವಾದ

ಸಿ) ಭಾರತದ ಭೂಭಾಗ ಲಡಾಖ್ ತನಗೆ ಸೇರಬೇಕೆಂಬ ಚೀನಾದ ವಾದ

ಡಿ) ಭಾರತದ ಭೂಭಾಗ ಮಣಿಪುರ ತನಗೆ ಸೇರಬೇಕೆಂಬ ಚೀನಾದ ವಾದ

3. ಭಾರತ ಮತ್ತು ರಷ್ಯಾಗಳ ನಡುವೆ 20 ವರ್ಷಗಳ ಶಾಂತಿ ,ಮೈತ್ರಿ ಹಾಗೂ ಸಹಕಾರ ಒಪ್ಪಂದ ಏರ್ಪಟ್ಟ ವರ್ಷ

ಎ) 1973 ಬಿ) 1970 ಸಿ) 1972 ಡಿ) 1971

4. ಭಾರತದ ಮೇಲೆ ಚೀನಾ ಅತಿಕ್ರಮಣ ಮಾಡಿದ ವರ್ಷ

ಎ) 1961 ಬಿ) 1965 ಸಿ) 1969 ಡಿ) 1962

5. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರಕಿಸಲು ಪ್ರಯತ್ನಿಸುತ್ತಿರುವ ದೇಶ

ಎ) ಅಮೇರಿಕಾ ಬಿ) ಬ್ರಿಟನ್ ಸಿ) ರಷ್ಯಾ ಡಿ) ಫ್ರಾನ್ಸ್

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಚೀನಾ ಕಮ್ಯುನಿಸ್ಟ್ ರಾಷ್ಟವೆಂದು ಉದಯಿಸಿದಾಗ ಅದಕ್ಕೆ ಮಾನ್ಯತೆ ನೀಡಿದ ಮೊದಲ ದೇಶ ಯಾವುದು?

2. ಭಯೋತ್ಪಾದನೆ ವಿರುದ್ಧ ಹೋರಾಡಲು ಭಾರತದೊಂದಿಗೆ ಸಮಾನ ಹಿತಾಸಕ್ತಿ ಹೊಂದಿರುವ ದೇಶ ಯಾವುದು?

3. 1961 ರಲ್ಲಿ ಗೋವಾ ವಿಮೋಚನೆ ಸಂದರ್ಭಲ್ಲಿ ಭಾರತಕ್ಕೆ ನೆರವು ನೀಡಿದ ರಾಷ್ಟ್ರ ಯಾವುದು?

## ಆಧ್ಯಾಯ 3 ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ

### ಬಹು ಆಯ್ಕೆ ಪ್ರಶ್ನೆಗಳು

1. ಸಾಮಾನ್ಯ ಸಭೆಯು ಮಾನವ ಹಕ್ಕುಗಳನ್ನು ಅಂಗೀಕರಿಸಿದ್ದು

ಎ) 10ನೇ ಡಿಸೆಂಬರ್ 1948 ಬಿ) 15ನೇ ಡಿಸೆಂಬರ್ 1945

ಸಿ) 25ನೇ ಡಿಸೆಂಬರ್ 1949 ಡಿ) 20ನೇ ಡಿಸೆಂಬರ್ 1946

2. ಪ್ರತಿ ವರ್ಷ ಮಾನವ ಹಕ್ಕುಗಳ ದಿನವನ್ನು ಅಚರಿಸುವುದು

ಎ) 15ನೇ ಡಿಸೆಂಬರ್ ಬಿ) 20ನೇ ಡಿಸೆಂಬರ್ ಸಿ) 25ನೇ ಡಿಸೆಂಬರ್ ಡಿ) 10ನೇ ಡಿಸೆಂಬರ್

3. ಅಮೇರಿಕಾದ ಸ್ವಾತಂತ್ರ್ಯ ಯುದ್ಧ ನಡೆದ ವರ್ಷ

ಎ) 1789 ಬಿ) 1776 ಸಿ) 1757 ಡಿ) 1879

4. ರಷ್ಯಾದ ಕ್ರಾಂತಿ ಜರುಗಿದ ವರ್ಷ

ಎ) 1916 ಬಿ) 1919 ಸಿ) 1917 ಡಿ) 1918

5. ಫ್ರಾನ್ಸಿನ ಮಹಾಕ್ರಾಂತಿ ನಡೆದ ವರ್ಷ

ಎ) 1789 ಬಿ) 1776 ಸಿ) 1757 ಡಿ) 1879

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ. ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ' ಎಂದು ಹೇಳಿದವರು ಯಾರು?
2. ನಿಶಸ್ತ್ರೀಕರಣ ಎಂದರೇನು?
3. ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವದ ಒಂದು ಐತಿಹಾಸಿಕ ಬಳವಳಿಯಾಗಿರುವ ಸಮಸ್ಯೆ ಯಾವುದು?

## ಅಧ್ಯಾಯ 4 ಜಾಗತಿಕ ಸಂಸ್ಥೆಗಳು

### ಬಹು ಆಯ್ಕೆ ಪ್ರಶ್ನೆಗಳು

1) ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಸಂಖ್ಯೆ.

ಎ) 195 ಬಿ) 193 ಸಿ) 192 ಡಿ) 190

2) ಯುನೈಟೆಡ್ ನೇಷನ್ಸ್ ಈ ಶಬ್ದವನ್ನು ಈಗ ಈ ರೀತಿ ಕರೆಯುತ್ತಿದ್ದಾರೆ.

ಎ) ವಿಶ್ವಸಂಸ್ಥೆ ಬಿ) ರಾಷ್ಟ್ರಸಂಘ ಸಿ) ತೃತೀಯ ಜಗತ್ತು ಡಿ) ವಿಶ್ವರಾಷ್ಟ್ರಗಳು

3) ವಿಶ್ವಸಂಸ್ಥೆಯ ರುವಾರಿಗಳು ಎಂದು ಇವರನ್ನು ಕರೆಯುತ್ತಾರೆ.

ಎ) ಚರ್ಚಿಲ್, ನೆಹರೂ, ಸ್ಟ್ಯಾಲಿನ್ ಬಿ) ರೂಸ್‌ವೆಲ್ಟ್, ಹಿಟ್ಲರ್, ಗೋರ್ಬಚೇವ್

ಸಿ) ರೂಸ್‌ವೆಲ್ಟ್, ಚರ್ಚಿಲ್, ಸ್ಟ್ಯಾಲಿನ್ ಡಿ) ರೂಸ್‌ವೆಲ್ಟ್, ಸ್ಟ್ಯಾಲಿನ್, ಮಾವೋತ್ಸೇತುಂಗ

4) ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು.

ಎ) ಅಮೇರಿಕ, ರಷ್ಯಾ, ಇಂಗ್ಲೇಂಡ್, ಪ್ರಾನ್ಸ್, ಚೀನಾ

ಬಿ) ಅಮೇರಿಕ, ರಷ್ಯಾ, ಇಂಗ್ಲೇಂಡ್, ಪ್ರಾನ್ಸ್, ಭಾರತ

ಸಿ) ರಷ್ಯಾ, ಚೀನಾ, ಭಾರತ, ಜಪಾನ್, ಪ್ರಾನ್ಸ್,

ಡಿ) ಭಾರತ, ಶ್ರೀಲಂಕಾ, ರಷ್ಯಾ, ಪ್ರಾನ್ಸ್, ಚೀನಾ

5) ಇದು ಸಾಮಾನ್ಯ ಸಭೆಯ ಉಪ/ಸಹಾಯಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ಎ) ಭದ್ರತಾ ಸಮಿತಿ ಬಿ) ದತ್ತಿ ಸಮಿತಿ

ಸಿ) ಅಂತರರಾಷ್ಟ್ರೀಯ ನ್ಯಾಯಾಲಯ ಡಿ) ಸಚಿವಾಲಯ

6) ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಆರಂಭಗೊಂಡ ಸಂಸ್ಥೆ.

ಎ) F.A.O. ಬಿ) W.H.O, ಸಿ) ILO ಡಿ) W.T.O

7) ಇಲ್ಲಿ ಸಾರ್ಕ್‌ನ ಮುಖ್ಯ ಕೇಂದ್ರ ಕಛೇರಿ ಇದೆ.

ಎ) ಪ್ಯಾರಿಸ್ ಬಿ) ಕಠ್ಮಂಡು ಸಿ) ನ್ಯೂಯಾರ್ಕ್ ಡಿ) ದಿ ಹೇಗ್

8) ಆಹಾರ ಮತ್ತು ಕೃಷಿ ಸಂಸ್ಥೆಯ ಸ್ಥಾಪನೆಯಾದ ವರ್ಷ.

ಎ) 1950 ಬಿ) 1948 ಸಿ) 1947 ಡಿ) 1945

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ ಯಾವದು? .
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ ಯಾವ ನಗರದಲ್ಲಿದೆ?
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ ಯಾವುದು?
4. ಅಂತರಾಷ್ಟ್ರೀಯ ನ್ಯಾಯಾಲಯವು ಕೇಂದ್ರ ಕಛೇರಿ ಎಲ್ಲಿದೆ?
5. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿ ಯಾರು?
6. ಮೊದಲನೇ ಮಹಾಯುದ್ಧದ ನಂತರ ಜಾಗತಿಕ ಶಾಂತಿಗೆಂದು ಸ್ಥಾಪಿತವಾದ ಸಂಸ್ಥೆ ಯಾವುದು?

7 ಕಾಮನ್‌ವೆಲ್ತ್ ಒಕ್ಕೂಟದ ಕೇಂದ್ರ ಕಚೇರಿ ಎಲ್ಲಿದೆ?.

8. ವಿಶ್ವಬ್ಯಾಂಕ್ ಎಂದು ಕರೆಯಲ್ಪಡುವ ಸಂಸ್ಥೆ ಯಾವುದು?
9. ಯುನಿಸೆಫ್ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶವೇನು?
10. ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಏಕೆ?
11. ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಏಕೆ ಕಡಿಮೆಯಾಗುತ್ತಿದೆ?
12. ಸಾರ್ಕ್ ಸಂಸ್ಥೆಯ ಮೂಲ ಉದ್ದೇಶವೇನು?
13. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಮುಖ್ಯ ಉದ್ದೇಶವೇನು?

**ಸಮಾಜಶಾಸ್ತ್ರ ವಿಭಾಗ**

**ಅಧ್ಯಾಯ 1 – ಸಾಮಾಜಿಕ ಸ್ತರ ವಿನ್ಯಾಸ**

1, ಅಸ್ಪೃಶ್ಯತೆ ಆಚರಣೆ ನಿಷೇಧಿಸಿದ ಸಂವಿಧಾನದ ವಿಧಿ

A] 17ನೇ ವಿಧಿ B] 14ನೇ ವಿಧಿ C] 24ನೇ ವಿಧಿ D] 21ನೇ ವಿಧಿ

2, 'ಮಾನವ ಕುಲ ತಾನೊಂದೆ ವಲಂ' – ಎಂದು ಹೇಳಿದವರು

A] ನೆಹರು B] ಗಾಂಧೀಜಿ C] ಅಂಬೇಡ್ಕರ್ D] ಪಂಪ

3, 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' – ಎಂದು ಹೇಳಿದವರು

A] ನೆಹರು B] ಅಂಬೇಡ್ಕರ್ C] ಗಾಂಧೀಜಿ D] ಸ್ವಾಮಿವಿವೇಕಾನಂದ

4, 'ಅಸ್ಪೃಶ್ಯತೆ ಅಪರಾಧಗಳ ಕಾಯ್ದೆ' ಯನ್ನು ಜಾರಿಗೆ ತಂದ ವರ್ಷ

A] 1976 B] 1989 C] 1955 D] 1947

5, 'ಅಸ್ಪೃಶ್ಯತೆ ಅಪರಾಧಗಳ ಕಾಯ್ದೆ'ಯಲ್ಲಿನ ಲೋಪದೋಷಗಳನ್ನು ತಿದ್ದುಪಡಿ ಮಾಡಿ ತರಲಾದ ಕಾಯ್ದೆ

A] ಗ್ರಾಹಕ ಹಕ್ಕುಗಳ ಸಂರಕ್ಷಣಾ ಕಾಯ್ದೆ B] ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

C] ಅಪರಾಧ ಹಕ್ಕುಗಳ ಸಂರಕ್ಷಣಾ ಕಾಯ್ದೆ D] ಅಸ್ಪೃಶ್ಯತೆ ನಿರ್ಮೂಲನ ಕಾಯ್ದೆ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1, ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

2, ಪೂರ್ವಗ್ರಹ ಎಂದರೇನು?

3. ಜಾತೀಯ ಸ್ತರ ವಿನ್ಯಾಸದಲ್ಲಿ ಸಮಾಜವು ಯಾರನ್ನು ಅತ್ಯಂತ ಕಡೆಯ ಹಂತದವರೆಂದು ಪರಿಗಣಿಸಲಾಗಿತ್ತು?

4. ಸಂವಿಧಾನದ 17ನೇ ವಿಧಿಯ ಮಹತ್ವ ಏನು?

5. ಭಾರತದಲ್ಲಿ ಸ್ತರ ವಿನ್ಯಾಸ ವ್ಯವಸ್ಥೆಯನ್ನು ಎಲ್ಲಿ ಗುರುತಿಸಬಹುದಾಗಿದೆ?

## ಅಧ್ಯಾಯ 2 – ದುಡಿಮೆ ಮತ್ತು ಆರ್ಥಿಕ ಜೀವನ

### ಬಹು ಆಯ್ಕೆ ಪ್ರಶ್ನೆಗಳು

1. ಶ್ರಮ ವಿಭಜನೆಯು ಕಾರಣವಾಗುವುದು

A) ದುಡಿಮೆಯ ತಾರತಮ್ಯಕ್ಕೆ B)ವಿಶೇಷ ಪರಿಣತಿಗೆ C) ನಿರುದ್ಯೋಗಕ್ಕೆ D) ಸಾಮಾಜಿಕ ನ್ಯಾಯಕ್ಕೆ

2. ಅಸಂಘಟಿತ ವಲಯದ ದುಡಿಮೆಗಾರ

A) ಸೈನಿಕ B] ಬ್ಯಾಂಕ್ ಉದ್ಯೋಗ C] ವಕೀಲ D] ಬೀಡಿ ಕಾರ್ಮಿಕ

3. ಇವುಗಳಲ್ಲಿ ಸಂಭಾವನೆ ರಹಿತ ದುಡಿಮೆಗೆ ಒಂದು ಉತ್ತಮ ಉದಾಹರಣೆ

A] ಗೃಹಿಣಿ B] ಶಿಕ್ಷಕಿ C] ಜೀತದಾಳು D] ಕೃಷಿ ಕಾರ್ಮಿಕ

4., ಕೇಂದ್ರ ಸರ್ಕಾರ 'ಸಮಾನ ವೇತನ' – ಕಾಯ್ದೆ ಜಾರಿಗೆ ತಂದ ವರ್ಷ

A] 1976 B] 1989 C] 1955 D] 1947

5. ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆಯು ಉಂಟಾಗಲು ಕಾರಣ

A] ನಗರೀಕರಣ B] ಕೈಗಾರೀಕರಣ C] ಜನಸಂಖ್ಯೆ ಹೆಚ್ಚಳ D] ಕಾರ್ಮಿಕರ ದುಡಿಮೆ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಶ್ರಮ ವಿಭಜನೆ ಎಂದರೇನು ?

2. ದುಡಿಮೆ ಎಂದರೇನು ?

3. 'ವಿಶೇಷ ಪರಿಣತಿ' ಎಂದರೇನು ?

4. ಕೂಲಿ ಸಹಿತ ದುಡಿಮೆ ಎಂದರೇನು?

5. ಕೂಲಿ ರಹಿತ ದುಡಿಮೆ ಎಂದರೇನು?

6. ನಿರುದ್ಯೋಗ ಎಂದರೇನು?

7. ಸಂಘಟಿತ ಕೆಲಸಗಾರರು ಎಂದರೇನು?

8. ಅಸಂಘಟಿತ ಕೆಲಸಗಾರರು ಎಂದರೇನು?

## ಅಧ್ಯಾಯ 3– ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

### ಬಹು ಆಯ್ಕೆ ಪ್ರಶ್ನೆಗಳು

1. ಮೌನ ಕಣಿವೆ ಆಂದೋಲನ ನಡೆದ ರಾಜ್ಯ

A] ಕರ್ನಾಟಕ B] ಉತ್ತರಪ್ರದೇಶ C] ಗುಜರಾತ್ D] ಕೇರಳ

2. ನರ್ಮದಾ ಆಂದೋಲನ ನಡೆದ ರಾಜ್ಯ

A] ಕರ್ನಾಟಕ B] ಉತ್ತರಪ್ರದೇಶ C] ಗುಜರಾತ್ D] ಕೇರಳ

3. ಡಾ, ಶಿವರಾಮ ಕಾರಂತರು ನೇತೃತ್ವದಲ್ಲಿ ನಡೆದ ಚಳುವಳಿ

A] ಚಿಪ್ಕೋ B] ಅಪ್ಪಿಕೋ C] ಮೌನಕಣಿವೆ ಆಂದೋಲನ D] ಕೈಗಾ ವಿರೋದಿ ಚಳುವಳಿ

4. ಸುಂದರಲಾಲ್ ಬಹುಗುಣ ಹಾಗೂ ಚಂಡಿಪ್ರಸಾದ್ ಭಟ್ಟರವರ ನೇತೃತ್ವದಲ್ಲಿ ನಡೆದ ಚಳುವಳಿ

A] ಚಿಪ್ಕೋ B] ಅಪ್ಪಿಕೋ C] ಮೌನಕಣಿವೆ ಆಂದೋಲನ D] ಕೈಗಾ ವಿರೋದಿ ಚಳುವಳಿ

5. ಮೇದಾಪಾಟ್ಕರ್ ಮತ್ತು ಬಾಬಾ ಆಮ್ಟೆ ರವರ ನೇತೃತ್ವದಲ್ಲಿ ನಡೆದ ಚಳುವಳಿ

A] ಅಪ್ಪಿಕೋ ಚಳುವಳಿ B] ಚಿಪ್ಕೋ ಚಳುವಳಿ

C] ನರ್ಮದಾ ಆಂದೋಲನ D] ಮೌನ ಕಣಿವೆ ಆಂದೋಲನ

6. ಚಿಪ್ಕೋ ಚಳುವಳಿ ನಡೆದ ವರ್ಷ

A] 1976 B] 1989 C] 955 D] 1973

7. ಅಪ್ಪಿಕೋ ಚಳುವಳಿ ನಡೆದ ವರ್ಷ

A] 1983 B] 1973 C] 1976 D] 1955

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ಜನಮಂದೆ ಎಂದರೇನು?

2. ದೊಂಬಿ ಎಂದರೇನು?

3. 'ಪರಿಸರ ಮಾಲಿನ್ಯ' ಎಂದರೇನು?

4. ಚಿಪ್ಕೋ ಚಳುವಳಿಯ ಪ್ರಮುಖ ಪರಿಣಾಮವೇನು?

5. ಕೈಗಾ ವಿರೋದಿ ಚಳುವಳಿ ನಡೆದ ಉದ್ದೇಶ ಏನು?

6. ಕರ್ನಾಟಕದ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋದಿ ಚಳುವಳಿ ಯಾವುದರ ವಿರುದ್ದ ನಡೆಯಿತು?

## ಆಧ್ಯಾಯ 4 – ಸಾಮಾಜಿಕ ಸವಾಲುಗಳು

### ಬಹು ಆಯ್ಕೆ ಪ್ರಶ್ನೆಗಳು

1. ಯಾವುದೇ ಕೈಗಾರಿಕಾ ಘಟಕದಲ್ಲಿ ಮಕ್ಕಳನ್ನು ನೇಮಿಸಬಾರದು ಎಂದು ಎಚ್ಚರಿಸಿದ ಸಂವಿಧಾನದ ವಿಧಿ

A] 21ನೇ ವಿಧಿ B] 17ನೇ ವಿಧಿ C] 24ನೇ ವಿಧಿ D] 23ನೇ ವಿಧಿ

2. ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೊಳಿಸಲಾದ ವರ್ಷ

A] 1986 B] 2006 C] 1961 D] 1976

3. ಕರ್ನಾಟಕ ರಾಜ್ಯದಲ್ಲಿ 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮ ಜಾರಿಗೆ ತಂದ ಉದ್ದೇಶ

A] ಶಾಲಾ ಮಕ್ಕಳಿಗೆ ಉಚಿತ ವಿದ್ಯಾರ್ಥಿ ವೇತನ ನೀಡಲು

B] ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಸೇರಿಸಲು

C] ಶಾಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು

D] ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ನೀಡಲು

4, ಬಾಲ್ಯ ವಿವಾಹ ನಡೆದಾಗ ದೂರು ನೀಡಬೇಕಾದ ಮಕ್ಕಳ ಸಹಾಯವಾಣಿ ಸಂಖ್ಯೆ

A] 1096 B] 1098 C] 1097 D] 1099

5. ಬಾಲ್ಯ ವಿವಾಹಕ್ಕೆ ಪ್ರಮುಖ ಕಾರಣ

A] ಲಿಂಗ ತಾರತಮ್ಯ B] ಸಾರ್ವಜನಿಕರ ಅಸಹಕಾರ

C] ಹಣಕಾಸು ಸಮಸ್ಯೆ D] ಕಾನೂನು ಅರಿವು ಇಲ್ಲದಿರುವುದು

6. "ಶಿಕ್ಷಣ ಹಕ್ಕು ಕಾಯ್ದೆ – 2009" ಜಾರಿಗೆ ತಂದ ಉದ್ದೇಶ

A] ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು

B] 6 ರಿಂದ 14 ವರ್ಷ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು

C] ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೌಲಭ್ಯ ಕಲ್ಪಿಸಲು

D] ಹಿಂದುಳಿದ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು

7. ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು ಜಾರಿಗೆ ತಂದ ಕಾಯ್ದೆ

A] 1995ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ

B] 1992ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ

C] 1993ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ

D] 1994ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ

8. ಭಾರತ ಸರ್ಕಾರವು ಬಾಲ ಕಾಮಿಕರ ಕಲ್ಯಾಣಕ್ಕಾಗಿಯೇ "ರಾಷ್ಟ್ರೀಯ ನೀತಿ" ರೂಪಿಸಿದ ವರ್ಷ

A] 1986 B] 1987 C] 1988 D] 1998

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹೆಣ್ಣು ಶಿಶು ಹತ್ಯೆ ಎಂದರೇನು?

2. ಹೆಣ್ಣು ಭ್ರೂಣ ಹತ್ಯೆ ಎಂದರೇನು?

3. ವರದಕ್ಷಿಣೆ ಎಂದರೇನು?

4 ಮೊದಲು ವರದಕ್ಷಿಣೆ ನಿಷೇಧ ಶಾಸನ ಯಾವಾಗ ಜಾರಿಗೆ ಬಂದಿತು?

5. 1961ರ ವರದಕ್ಷಿಣೆ ನಿಷೇಧ ಶಾಸನದ ಪ್ರಕಾರ ನೀಡುವ ಶಿಕ್ಷೆ ಏನು?

6. 1986 ರ ವರದಕ್ಷಿಣೆ ನಿಷೇಧ ಶಾಸನದ ಪ್ರಕಾರ ನೀಡುವ ಶಿಕ್ಷೆ ಏನು?

7. ಬಾಲ್ಯ ವಿವಾಹ ಎಂದರೇನು?

8. ಬಾಲಕಾರ್ಮಿಕರು ಎಂದರೆ ಯಾರು?

9. ಬಾಲ್ಯವಿವಾಹ ನಿಷೇಧ ಜಾರಿಗೆ ಬಂದ ವರ್ಷ ಯಾವುದು?

10, ವರದಕ್ಷಿಣೆ ನಿಷೇಧ ಶಾಸನ ಮೊದಲು ಜಾರಿಗೆ ಬಂದ ವರ್ಷ ಯಾವುದು?

11. ವರದಕ್ಷಿಣೆ ನಿಷೇಧ ಶಾಸನ ತಿದ್ದಪಡಿ ಮಾಡಿದ ವರ್ಷ ಯಾವುದು?

12. ಸಂವಿಧಾನದ 24ನೇ ವಿಧಿಯ ಮಹತ್ವ ಏನು?

## ಭೂಗೋಳ ಶಾಸ್ತ್ರ

### ಅಧ್ಯಾಯ:–1 – ಭಾರತ; ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

### ಬಹು ಅಯ್ಕೆ ಪ್ರಶ್ನೆಗಳು.

1. ಇಂಡಿಯಾ ಎಂಬ ಹೆಸರು ಯಾವ ನದಿಯಿಂದ ಬಂದಿದೆ,

ಎ) ನರ್ಮದಾ ಬಿ) ಗಂಗಾ ಸಿ) ಸಿಂಧೂ ಡಿ)ಬ್ರಹ್ಮಪುತ್ರ

2. ಭಾರತದ ಮದ್ಯಭಾಗದಲ್ಲಿ ಹಾದು ಹೋಗಿರುವ ಅಕ್ಷಾಂಶ

ಎ) ಸಮಭಾಜಕ ವೃತ್ತ ಬಿ) ಕರ್ಕಾಟಕ ಸಂಕ್ರಾಂತಿವೃತ್ತ ಸಿ) ಮಕರ ಸಂಕ್ರಾಂತಿವೃತ್ತ ಡಿ) ಉತ್ತರ ಮೇರುವೃತ್ತ

3. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರ

ಎ) ಕೆ2 ಬಿ) ಮೌಂಟ್ ಎವರೆಸ್ಟ್ ಸಿ) ಆನೈಮುಡಿ ಡಿ)ಅರ್ಮಕೊಂಡ

4. ಉತ್ತರ ಮೈದಾನದಲ್ಲಿ ಕಂಡುಬರುವ ಮಣ್ಣಿನ ಪ್ರಕಾರ

ಎ) ಕೆಂಪುಮಣ್ಣು ಬಿ) ಕಪ್ಪುಮಣ್ಣು ಸಿ) ಮೆಕ್ಕಲುಮಣ್ಣು ಡಿ) ಪರ್ವತದ ಮಣ್ಣು

5. ಜಲಾವೃತಗೊಂಡಿರುವ ಭಾರತದ ನೆರೆಯ ರಾಷ್ಟ್ರ

ಎ) ಚೀನಾ ಬಿ)ಪಾಕಿಸ್ತಾನ ಸಿ) ನೇಪಾಳ ಡಿ)ಶ್ರೀಲಂಕ

6 ಗೊಂಡ್ವಾನ ಭೂರಾಶಿಯ ಭಾಗವಾಗಿರುವ ಭಾರತದ ಪ್ರಾಕೃತಿಕ ವಿಭಾಗ

ಎ) ಮಹಾ ಹಿಮಾಲಯ ಬಿ) ಶಿವಾಲಿಕ್ ಶ್ರೇಣಿ ಸಿ) ಉತ್ತರದ ಬಯಲು ಡಿ)ಪರ್ಯಾಯ ಪ್ರಸ್ಥಭೂಮಿ

7 "ಡೂನ್"ಗಳು ಕಂಡುಬರುವುದು ಈ ಶ್ರೇಣಿಯಲ್ಲಿ

ಎ) ಮಹಾ ಹಿಮಾಲಯ ಬಿ)ಶಿವಾಲಿಕ್ ಶ್ರೇಣಿ ಸಿ) ಉತ್ತರದ ಬಯಲು ಡಿ)ಪರ್ಯಾಯ ಪ್ರಸ್ಥಭೂಮಿ

8 ಪಶ್ಚಿಮ ಘಟ್ಟಕ್ಕೆ ಸೇರಿರುವ ಪರ್ವತ ಶಿಖರ

ಎ) ನಂದಾದೇವಿ ಬಿ)ದವಲಗಿರಿ ಸಿ) ಕಾಂಚನಗಂಗಾ ಡಿ) ಆನೈಮುಡಿ

**ಒಂದು ಅಂಕದ ಪ್ರಶ್ನೋತ್ತರಗಳು**

1 ಭಾರತವು ಏಷ್ಯಾಖಂಡದ ಯಾವ ಭಾಗದಲ್ಲಿದೆ.

2 ಭಾರತವನ್ನು ಒಂದು ಉಪಖಂಡವೆಂದು ಕರೆಯಲು ಕಾರಣವೇನು?

3. ಭಾರತದ ಭೂ ಕ್ಷೇತ್ರದ ಒಟ್ಟು ವಿಸ್ತೀರ್ಣ ಎಷ್ಟು?

4. ಭಾರತದ ದಕ್ಷಿಣದ ತುತ್ತತುದಿ ಯಾವುದು?

5. ಇಂದಿರಾಕೋಲ್ ಯಾವ ದ್ವೀಪ ಸಮೂಹದಲ್ಲಿದೆ

6. ಮಹಾಹಿಮಾಲಯವನ್ನು ಹಿಮಾದ್ರಿ ಎನ್ನಲು ಕಾರಣವೇನು?

7 ಉತ್ತರ ಮೈದಾನವನ್ನು ಸಂಚಯನ ಮೈದಾನವೆನ್ನಲು ಕಾರಣವೇನು?

8 ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು ಯಾವ ಹೆಸರಿನಿಂದ ಕರೆಯುತ್ತಾರೆ.

9 ಹಿಮಾಲಯದ ಪಾದಬೆಟ್ಟಗಳಿಗಿರುವ ಮತ್ತೊಂದು ಹೆಸರು.

10 ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ಪರ್ವತ ಶಿಖರ ಯಾವುದು?

**ಅಧ್ಯಾಯ;–2 ಭಾರತದ ಋತುಗಳು.**

**ಬಹು ಆಯ್ಕೆ ಪ್ರಶ್ನೆಗಳು**

1. ಅತಿ ಹೆಚ್ಚು ಮಳೆ ಬೀಳುವ ಋತುಮಾನ

ಎ) ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಬಿ) ಚಳಿಗಾಲ

ಸಿ) ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ ಡಿ) ಬೇಸಿಗೆಕಾಲ

2 ಭಾರತದಲ್ಲಿ ಅತೀ ಹೆಚ್ಚು ಮಳೆಪಡೆಯುವ ರಾಜ್ಯ

ಎ) ಮೇಘಾಲಯ ಬಿ) ಕರ್ನಾಟಕ ಸಿ) ಹರಿಯಯಾಣ ಡಿ) ತಮಿಳುನಾಡು

3. ಭಾರತದಲ್ಲಿ ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಅತಿ ಕಡಿಮೆ ಮಳೆಯನ್ನು ಪಡೆಯಲು ಕಾರಣ

ಎ) ಅವು ಮಳೆ ನೆರಳಿನ ಪ್ರದೇಶಗಳಾಗಿವೆ ಬಿ) ಅವು ಹಿಮದಿಂದ ಕೂಡಿವೆ

ಸಿ) ಡಿ) ಹೆಚ್ಚು ಅರಣ್ಯಗಳಿಂದ ಕೂಡಿವೆ ಡಿ) ಅವು ದಕ್ಷಿಣ ಭಾಗದಲ್ಲಿವೆ

4. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು.

ಎ) ಕಾಲ ಬೈಸಾಕಿ – ಕೇರಳ ಬಿ) ಅಂದೀಸ್ – ತಮಿಳುನಾಡು

ಸಿ) ಮಾವು ಫಸಲಿನ ಮಳೆ – ಪ,ಬಂಗಾಳ ಡಿ) ಕಾಫೀಯ ಹೂ ಮಳೆ – ಕರ್ನಾಟಕ

**ಒಂದು ಅಂಕದ ಪ್ರಶ್ನೋತ್ತರಗಳು**

1. ಭಾರತದಲ್ಲಿ ಅತೀ ಹೆಚ್ಚು ಮಳೆಯಾಗುವ ಸ್ಥಳ ಯಾವುದು?
2. ಭಾರತದಲ್ಲಿ ಅತೀ ಕಡಿಮೆ ಮಳೆಯಾಗುವ ಸ್ಥಳ ಯಾವುದು?
3. ಮಾನ್ಸೂನ್ ಮಾರುತ ಎಂದರೇನು?
4. ಭಾರತದಲ್ಲಿ ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಮಳೆಯಾಗಲು ಕಾರಣವೇನು?
5. ಪಶ್ಚಿಮ ಬಂಗಾಳದಲ್ಲಿ ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಏನೇಂದು ಕರೆಯುತ್ತಾರೆ?
6. ಕೇರಳದಲ್ಲಿ ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಏನೇಂದು ಕರೆಯುತ್ತಾರೆ?
7. ಕರ್ನಾಟಕದಲ್ಲಿ ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಬೀಳುವ ಮಳೆಯನ್ನು ಏನೇಂದು ಕರೆಯುತ್ತಾರೆ?
8. ನೈರುತ್ಯ ಮಾನ್ಸೂನ್ ಮಾರುತಗಳಎರಡು (ಕವಲು) ಶಾಖೆಗಳು ಯಾವುವು?

**ಅಧ್ಯಾಯ;–3 ಭಾರತದ ಮಣ್ಣುಗಳು**

**ಬಹು ಆಯ್ಕೆ ಪ್ರಶ್ನೆಗಳು**

1. ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣವಾದ ಮಣ್ಣು

ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು ಸಿ) ಕೆಂಪುಮಣ್ಣು ಡಿ) ಲ್ಯಾಟರೈಟ್ ಮಣ್ಣು

2. ಈ ಮಣ್ಣನ್ನು ಕಪ್ಪುಹತ್ತಿ ಮಣ್ಣು ಎಂದೂ ಕರೆಯುತ್ತಾರೆ

ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು ಸಿ) ಕೆಂಪುಮಣ್ಣು ಡಿ) ಲ್ಯಾಟರೈಟ್ ಮಣ್ಣು

3. ಅತ್ಯಧಿಕ ಉಷ್ಣಾಂಶ ಮತ್ತು ಅತ್ಯಧಿಕ ಮಳೆಯ ಪರಿಸ್ಥಿತಿಯಲ್ಲಿ ಉತ್ಪತ್ತಿಯಾಗುವ ಮಣ್ಣು ಇದಾಗಿದೆ

ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು ಸಿ) ಕೆಂಪುಮಣ್ಣು ಡಿ) ಲ್ಯಾಟರೈಟ್ ಮಣ್ಣು

4. ಪರ್ವತ ಮಣ್ಣು ಈ ಬೆಳೆಗಳ ಬೇಸಾಯಕ್ಕೆ ಹೆಚ್ಚು ಅನುಕೂಲವಾಗಿದೆ.

ಎ) ನೆಡುತೋಟದ ಬೆಳೆಗಳು ಬಿ) ತರಕಾರಿಗಳು ಸಿ) ರಾಗಿ ಡಿ) ಭತ್ತ

5. ಸ್ಫಟಿಕ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿಯಾಗಿರುವ ಮಣ್ಣು ಇದಾಗಿದೆ.

ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು ಸಿ) ಕೆಂಪುಮಣ್ಣು ಡಿ) ಪರ್ವತ ಮಣ್ಣು

7 ರಾಜಸ್ತಾನದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣಿನ ವಿಧ

ಎ) ಮೆಕ್ಕಲು ಮಣ್ಣು ಬಿ) ಕಪ್ಪುಮಣ್ಣು ಸಿ) ಕೆಂಪುಮಣ್ಣು ಡಿ)ಮರುಭೂಮಿ ಮಣ್ಣು

8 ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತ ಏಕೆ?

ಎ) ಕಡಿಮೆ ತೇವಾಂಶ ಹಿಡಿದಿಟ್ಟು ಕೊಳ್ಳುವ ಸಾಮರ್ಥ್ಯ ಹೊಂದಿದೆ ಬಿ) ಹೆಚ್ಚು ಮಳೆ ಬೀಳುವ ಭಾಗದಲ್ಲಿ ಕಂಡುಬರುತ್ತದೆ

ಸಿ) ಧೀರ್ಘಕಾಲ ತೇವಾಂಶ ಹಿಡಿದಿಟ್ಟು ಕೊಳ್ಳುವ ಸಾಮರ್ಥ್ಯ ಹೊಂದಿದೆ ಡಿ) ಸ್ಪಟಿಕ ಶಿಲೆಗಳಿಂದ ರಚನೆಯಾಗಿದೆ

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1) ರೇಗರ ಮಣ್ಣು ಎಂದು ಯಾವ ಮಣ್ಣನ್ನು ಕರೆಯುತ್ತಾರೆ?

2) ಕಪ್ಪು ಮಣ್ಣನ್ನು ಕಪ್ಪು ಹತ್ತಿಯ ಮಣ್ಣು ಎಂದು ಕರೆಯುತ್ತಾರೆ. ಏಕೆ?

3) ಕಪ್ಪು ಮಣ್ಣು ಹೇಗೆ ಉತ್ಪತ್ತಿ‍ಯಾಗುತ್ತದೆ?

4) ಕಪ್ಪು ಮಣ್ಣು ಧೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುತ್ತದೆ. ಏಕೆ?

5)ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತ. ಏಕೆ?

6) ಜಂಬಿಟ್ಟಿಗೆ ಮಣ್ಣು ಹೇಗೆ ರಚನೆಗೊಂಡಿದೆ?

7)ಮರಭೂಮಿ ಮಣ್ಣು ಹೇಗೆ ನಿರ್ಮಾಣ ಹೊಂದಿದೆ?

8) ಪರ್ವತ ಮಣ್ಣು ಹೇಗೆ ಉತ್ಪತ್ತಿ ಯಾಗುವುದು?

9) ಮಣ್ಣಿನ ಸವೆತ (ಭೂ ಸವೆತ) ಎಂದರೇನು?

10) ಇತ್ತೀಚಿಗೆ ಜಲಾಶಯಗಳಲ್ಲಿನ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಏಕೆ?

11) ಮಣ್ಣಿನ ಸಂರಕ್ಷಣೆ ಎಂದರೇನು?

## ಅಧ್ಯಾಯ 4– ಭಾರತದ ಅರಣ್ಯಗಳು

### ಬಹು ಆಯ್ಕೆ ಪ್ರಶ್ನೆಗಳು

1. ಭಾರತದಲ್ಲಿ ಹೆಚ್ಚು ವಿಸ್ತಾರವಾಗಿ ವ್ಯಾಪಿಸಿರುವ ಅರಣ್ಯಗಳೆಂದರೆ

ಎ) ನಿತ್ಯ ಹರಿದ್ವರ್ಣದ ಕಾಡುಗಳು ಬಿ) ಎಲೆಯುದುರುವ ಮಾನ್ಸೂನ್ ಅರಣ್ಯಗಳು

ಸಿ) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಡಿ) ಮ್ಯಾಂಗ್ರೋವ್ ಅರಣ್ಯಗಳು

2. ಬಿಳಿಲುಗಳು ಈ ಅರಣ್ಯಗಳ ಪ್ರಮುಖ ಲಕ್ಷಣ

ಎ) ನಿತ್ಯ ಹರಿದ್ವರ್ಣದ ಕಾಡುಗಳು ಬಿ) ಎಲೆಯುದುರುವ ಮಾನ್ಸೂನ್ ಅರಣ್ಯಗಳು

ಸಿ) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಡಿ) ಮ್ಯಾಂಗ್ರೋವ್ ಅರಣ್ಯಗಳು

3. ಈ ಪ್ರಕಾರದ ಅರಣ್ಯದಲ್ಲಿನ ಸಸ್ಯಗಳು ಆಳವಾದ ಬೇರನ್ನು ಹೊಂದಿದ್ದು ಕುರುಚಲು ಜಾತಿಗೆ ಸೇರಿರುತ್ತವೆ.

ಎ) ನಿತ್ಯ ಹರಿದ್ವರ್ಣದ ಕಾಡುಗಳು ಬಿ) ಎಲೆಯುದುರುವ ಮಾನ್ಸೂನ್ ಅರಣ್ಯಗಳು

ಸಿ) ಮರುಭೂಮಿ ಅರಣ್ಯಗಳು ಡಿ) ಮ್ಯಾಂಗ್ರೋವ್ ಅರಣ್ಯಗಳು

4. ಈ ಅರಣ್ಯಗಳಲ್ಲಿ ಸಾಲ್,ಬೈರಾ, ಟೂನ್, ಸಿಲ್ವರ್,ಲಾರೆಲ್ ಸಸ್ಯಗಳು ಕಂಡು ಬರುತ್ತವೆ

ಎ) ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಬಿ) ಹಿಮಾಲಯ ಆಲ್ಪೈನ್ ಅರಣ್ಯಗಳಲ್ಲಿ

ಸಿ) ಮರುಭೂಮಿ ಅರಣ್ಯಗಳಲ್ಲಿ ಡಿ) ಮ್ಯಾಂಗ್ರೋವ್ ಅರಣ್ಯಗಳಲ್ಲಿ

5. ರಾಷ್ಟ್ರೀಯ ಅರಣ್ಯ ನೀತಿ ಪ್ರಕಾರ ಭಾರತ _______ ರಷ್ಟು ಅರಣ್ಯ ಪ್ರದೇಶವನ್ನು ಹೊಂದಿರಬೇಕು.

ಎ) 18.2% ಬಿ) 20% ಸಿ) 21.2% ಡಿ) 33.3%

6. ಭಾರತದಲ್ಲಿ ಅತಿ ಹೆಚ್ಚು ಅರಣ್ಯ ಕ್ಷೇತ್ರವನ್ನು ಹೊಂದಿರುವ ರಾಜ್ಯ

ಎ) ಕರ್ನಾಟಕ ಬಿ) ಮಧ್ಯಪ್ರದೇಶ ಸಿ) ಹರಿಯಾಣ ಡಿ) ಉತ್ತರ ಪ್ರದೇಶ

7. ಭಾರತರ್ದಲ್ಲಿ ಅತಿ ಕಡಿಮೆ ಅರಣ್ಯ ಕ್ಷೇತ್ರವನ್ನು ಹೊಂದಿರುವ ರಾಜ್ಯ

ಎ) ಕರ್ನಾಟಕ ಬಿ) ಮಧ್ಯಪ್ರದೇಶ ಸಿ) ಹರಿಯಾಣ ಡಿ) ಉತ್ತರ ಪ್ರದೇಶ

8. ಭಾರತದಲ್ಲಿ ಇಂದು ಇರುವ ವನ್ಯಧಾಮಗಳ ಸಂಖ್ಯೆ

ಎ) 523 ಬಿ) 489 ಸಿ) 518 ಡಿ) 350

9. ಉತ್ತರಾಂಚಲ ರಾಜ್ಯದಲ್ಲಿರುವ ಪ್ರಮುಖ ರಾಷ್ಟ್ರೀಯ ಉದ್ಯಾನವನ.

ಎ) ಹಜಾರಿಭಾಗ್ ನ್ಯಾಷನಲ್ ಪಾರ್ಕ್ ಬಿ) ಕನ್ಹಾ ನ್ಯಾಷನಲ್ ಪಾರ್ಕ್

ಸಿ) ಗಿರ್ ನ್ಯಾಷನಲ್ ಪಾರ್ಕ್ ಡಿ) ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್

10. ಭಾರತದಲ್ಲಿರುವ ಜೈವಿಕ ಸಂರಕ್ಷಣಾ ವಲಯಗಳು

ಎ) 10 ಬಿ) 15 ಸಿ) 18 ಡಿ) 24

11. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವು ಈ ರಾಜ್ಯದಲ್ಲಿದೆ.

ಎ) ಕರ್ನಾಟಕ ಬಿ) ಮಧ್ಯಪ್ರದೇಶ ಸಿ) ಹರಿಯಾಣ ಡಿ) ಉತ್ತರ ಪ್ರದೇಶ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1) ನಿತ್ಯಹರಿದ್ವರ್ಣ ಅರಣ್ಯಗಳು ಎಂದು ಹೆಸರು ಬರಲು ಕಾರಣವೇನು?

2) ಭಾರತದಲ್ಲಿ ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳು ವ್ಯಾಪಕವಾಗಿ ಹರಡಲು ಕಾರಣವೇನು?

3) ಮಾನ್ಸೂನ್ ಅರಣ್ಯಗಳನ್ನು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳೆಂದು ಕರೆಯುತ್ತಾರೆ. ಏಕೆ?

4) ಗಂಗಾನದಿಯ ಮುಖಜ ಭೂಮಿಯನ್ನು ಸುಂದರಬನ್ ಎಂದು ಕರೆಯಲು ಕಾರಣವೇನು?

5) ಅರಣ್ಯ ಸಂರಕ್ಷಣೆ ಎಂದರೇನು?

5) ವನ್ಯ ಜೀವಿಧಾಮಗಳನ್ನು ಏಕೆ ಸ್ಥಾಪಿಸಲಾಗಿದೆ?

## ಅಧ್ಯಾಯ 5– ಭಾರತದ ಜಲ ಸಂಪನ್ಮೂಲಗಳು

### ಬಹುಆಯ್ಕೆ ಪ್ರಶ್ನೆಗಳು

1. ಗೊವೀಂದ ಸಾಗರ ಎಂದು ಕರೆಯಲ್ಪಡುವ ವಿವಿದೊದ್ದೇಶ ನದಿಕಣಿವೆ ಯೋಜನೆ

ಎ) ತುಂಗಭದ್ರಾ ಬಿ) ಭಾಕ್ರಾ–ನಂಗಲ್ ಸಿ) ಕೋಸಿ ಡಿ)ಹಿರಾಕುಡ್

2. ಪಂಪಸಾಗರ ಎಂದು ಕರೆಯಲ್ಪಡುವ ಅಣೆಕಟ್ಟು

ಎ) ಭಾಕ್ರಾ–ನಂಗಲ್ ಬಿ) ಹಿರಾಕುಡ್ ಸಿ) ತುಂಗಾ – ಭದ್ರಾ ಡಿ) ಕೋಸಿ ಯೋಜನೆ

3. ದಾಮೋದರ ನದಿಗೆ ಈ ಅಣೆಕಟ್ಟನ್ನು ನಿಮೀಸಲಾಗಿರುವುದಿಲ್ಲ

ಎ) ತಿಲೈಯಾ ಬಿ) ಕೋನಾರ್ ಸಿ) ಪಂಚೇತ್ ಹಿಲ್ ಡಿ) ನಂಗಲ್

4. ಸಟ್ಲೇಜ್ ನದಿಗೆ ನಿಮೀಸಲಾದ ಜಲಾಶಯ

ಎ) ಭಾಕ್ರಾ–ನಂಗಲ್ ಬಿ) ತುಂಗಾ – ಭದ್ರಾ ಸಿ) ಹಿರಾಕುಡ್ ಯೋಜನೆ ಡಿ) ಕೋಸಿ ಯೋಜನೆ

5. ಪಶ್ಚಿಮ ಬಂಗಾಳದ ಕಣ್ಣಿರಿನ ನದಿ

ಎ) ತುಂಗಾ–ಭದ್ರಾ ಬಿ) ದಾಮೋದರ ನದಿ ಸಿ) ಕೋಸಿ ನದಿ ಡಿ) ಮಹಾನದಿ

6. ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯ ಎಂದು ಕರೆಯಲ್ಪಡುವ ಅಣೆಕಟ್ಟು

ಎ) ಕೃಷ್ಣ ಮೇಲ್ದಂಡೆ ಯೋಜನೆ ಬಿ) ಹಿರಾಕುಡ್ ಅಣೆಕಟ್ಟು ಸಿ) ಭಾಕ್ರಾ–ನಂಗಲ್ ಡಿ) ತುಂಗಾ – ಭದ್ರಾ

8. ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ನೀರಾವರಿಯ ವಿಧ

ಎ) ಕೆರೆ ನೀರಾವರಿ ಬಿ) ಕಾಲುವೆ ನೀರಾವರಿ ಸಿ) ಹನಿ ನೀರಾವರಿ ಡಿ) ಬಾವಿ ನೀರಾವರಿ

9. ಭಾರತದ ಮೊಟ್ಟಮೊದಲ ವಿವಿದೋದ್ದೇಶ ನದಿಕಣಿವೆ ಯೋಜನೆ

ಎ) ದಾಮೋದರ ನದಿ ಕಣಿವೆ ಯೋಜನೆ ಬಿ) ತುಂಗಭದ್ರ ಯೋಜನೆ

ಸಿ) ಕೃಷ್ಣಮೇಲ್ದಂಡೆ ಯೋಜನೆ ಡಿ) ಭಾಕ್ರಾ ನಂಗಲ್ ಯೋಜನೆ

10. ಒಡಿಶಾದ ದುಃಖದ ನದಿ' ಎಂದು ಕರೆಯಲ್ಪಡುವ ನದಿ

ಎ) ಕೋಸಿ ನದಿ ಬಿ) ಗಂಗಾನದಿ ಸಿ) ದಾಮೋದರ ನದಿ ಡಿ) ಮಹಾನದಿ

11. ಭಾಕ್ರಾ ಅಣೆಕಟ್ಟೆಯನ್ನು ಹೀಗೂ ಕರೆಯುತ್ತಾರೆ.

ಎ) ಬಸವಸಾಗರ ಬಿ) ಪಂಪಸಾಗರ ಸಿ) ನಾರಾಯಣಸಾಗರ ಡಿ) ಗೋವಿಂದ ಸಾಗರ

12. ಭಾರತದ ಅತೀ ಉದ್ದವಾದ ಅಣೆಕಟ್ಟು

ಎ) ಹಿರಾಕುಡ್ ಬಿ) ತುಂಗಭದ್ರ ಸಿ) ಕೋಸಿ ಅಣೆಕಟ್ಟು ಡಿ) ಭಾಕ್ರಾನಂಗಲ್ ಅಣೆಕಟ್ಟು

13. ತುಂಗಾಭದ್ರ ಜಲಾಶಯಕ್ಕಿರುವ ಮತ್ತೊಂದು ಹೆಸರು.

ಎ) ಗೋವಿಂದ ಸಾಗರ ಬಿ) ಪಂಪಸಾಗರ

ಸಿ) ಗೋವಿಂದ ವಲ್ಲಭ ಪಂತ್ ಸಾಗರ ಡಿ) ಸರ್ದಾರ್ ಸರೋವರ

14. ಉತ್ತರ ಕರ್ನಾಟಕದ ಅತಿದೊಡ್ಡ ನದಿ ಕಣಿವೆ ಯೋಜನೆ

ಎ) ಕೃಷ್ಣಮೇಲ್ದಂಡೆ ಬಿ) ಕೋಸಿ ಸಿ) ಹಿರಾಕುಡ್ ಡಿ) ತುಂಗಭದ್ರ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1) ನೀರಾವರಿ ಎಂದರೇನು?

2) ಭಾರತದಲ್ಲಿ ಕೃಷಿಗೆ ನೀರಾವರಿ ಅಗತ್ಯ.ಏಕೆ?

3) ಪ್ರವಾಹ ಕಾಲುವೆ ಎಂದರೇನು?

4) ಸಾರ್ವಕಾಲಿಕ ಕಾಲುವೆ ಎಂದರೇನು?

5) ವಿವಿದೋದ್ದೇಶ ನದಿಕಣಿವೆ ಯೋಜನೆಗಳೆಂದರೇನು?

6) ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎಂದು ಕರೆಯುತ್ತಾರೆ. ಏಕೆ?

7) ರಾಷ್ಟ್ರೀಯ ವಿದ್ಯುತ್ ಜಾಲವನ್ನು ಏಕೆ ನಿರ್ಮಿಸಲಾಗಿದೆ?

8) ಮಳೆಕೊಯ್ಲು ಎಂದರೇನು?

## ಅಧ್ಯಾಯ 6 – ಭಾರತದ ಭೂ ಬಳಕೆ ಹಾಗೂ ಕೃಷಿ

### ಬಹುಆಯ್ಕೆ ಪ್ರಶ್ನೆಗಳು

1. ಒಂದು ವರ್ಷದಲ್ಲಿ ವ್ಯವಸಾಯದ ಕ್ಷೇತ್ರದಿಂದ ಎರಡು–ಮೂರು ಬೆಳೆಗಳನ್ನು ಬೆಳೆಯುವುದೇ

ಎ) ಸ್ಥಿರ ಬೇಸಾಯ ಬಿ) ವಾಣಿಜ್ಯ ಬೇಸಾಯ ಸಿ) ಸಾಂದ್ರ ಬೇಸಾಯ ಡಿ) ಮಿಶ್ರ ಬೇಸಾಯ

2. ಜೂನ್/ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಿ ಸೆಪ್ಟಂಬರ್/ಅಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವ ಬೇಸಾಯವೇ

ಎ) ಮುಂಗಾರು ಬಿ) ಹಿಂಗಾರು ಸಿ) ಜೇಡ್ ಡಿ) ಸಾಂದ್ರ

3. ಅಕ್ಟೋಬರ್/ನವಂಬರ್ ತಿಂಗಳಿನಲ್ಲಿ ಬಿತ್ತನೆ ಮಾಡಿ ಫೆಬ್ರವರಿ/ಮಾರ್ಚ್ ತಿಂಗಳಲ್ಲಿ ಕಟಾವು ಮಾಡುವ ಬೇಸಾಯವೇ

ಎ) ಮುಂಗಾರು ಬಿ) ಹಿಂಗಾರು ಸಿ) ಜೇಡ್ ಡಿ) ಸಾಂದ್ರ

4. ಮುಂಗಾರು ಮತ್ತು ಹಿಂಗಾರು ಬೇಸಾಯಗಳ ನಡುವಣ ಬೇಸಾಯ

ಎ) ಮುಂಗಾರು ಬಿ) ಹಿಂಗಾರು ಸಿ) ಜೇಡ್ ಡಿ) ಸಾಂದ್ರ

5. ಭಾರತದ ಪ್ರಮುಖ ಹಿಂಗಾರು ಬೆಳೆ

ಎ) ಭತ್ತ ಬಿ)ಹತ್ತಿ ಸಿ) ಹೊಗೆಸೊಪ್ಪು ಡಿ) ಗೋಧಿ

6. ಭಾರತವು ಭತ್ತದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿಯೇ ಹೊಂದಿರುವ ಸ್ಥಾನ

ಎ) ಮೊದಲನೆ ಬಿ) ಎರಡನೆ ಸಿ) ಮೂರನೆ ಡಿ) ನಾಲ್ಕನೆ

7. ಭಾರತದಲ್ಲಿ ಅತಿ ಹೆಚ್ಚು ಭತ್ತಬೆಳೆಯುವ ರಾಜ್ಯ

ಎ) ಪಶ್ಚಿಮ ಬಂಗಾಳ ಬಿ) ಉತ್ತರ ಪ್ರದೇಶ ಸಿ) ಪಂಜಾಬ್ ಡಿ) ಕರ್ನಾಟಕ

8. ಭಾರತದಲ್ಲಿಅತಿ ಹೆಚ್ಚುಗೋಧಿ ಬೆಳೆಯುವ ರಾಜ್ಯ

ಎ) ಪಶ್ಚಿಮ ಬಂಗಾಳ ಬಿ) ಉತ್ತರ್ತ ಪ್ರದೇಶ ಸಿ) ಪಂಜಾಬ್ ಡಿ) ಕರ್ನಾಟಕ

9. ಗೋಧಿಯ ಕಣಜ ಎಂದು ಕರೆಯಲ್ಪಡುವ ರಾಜ್ಯ

ಎ) ಪಶ್ಚಿಮ ಬಂಗಾಳ ಬಿ) ಉತ್ತರ್ತ ಪ್ರದೇಶ ಸಿ) ಪಂಜಾಬ್ ಡಿ) ಅಂದ್ರಪ್ರದೇಶ

10. ಸುವರ್ಣಕ್ರಾಂತಿ ಈ ಬೇಸಾಯಕ್ಕೆ ಸಂಬಂಧಿಸಿದೆ

ಎ) ಮೀನುಗಾರಿಕೆ ಬಿ) ಗಣಿಗಾರಿಕೆ ಸಿ) ಹೈನುಗಾರಿಕೆ ಡಿ) ತೋಟಗಾರಿಕೆ

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1) ಭೂ ಬಳಕೆ ಎಂದರೇನು?

2) ಬೀಳು ಭೂಮಿಯನ್ನು ವ್ಯವಸಾಯಕ್ಕೆ ಹೇಗೆ ಬಳಸಬಹುದಾಗಿದೆ?

3) ವ್ಯವಸಾಯ (ಕೃಷಿ) ಎಂದರೇನು?

4) ಸಾಂದ್ರ ಬೇಸಾಯ ಎಂದರೇನು?

5) ಜೀವನಾಧಾರಿತ ಬೇಸಾಯ ಎಂದರೇನು?

6) ಸ್ಥಿರ ಬೇಸಾಯ ಎಂದರೇನು?

7) ಸ್ಥಳಾಂತರ ಬೇಸಾಯ ಎಂದರೇನು?

8) ವಾಣಿಜ್ಯ ಬೇಸಾಯ ಎಂದರೇನು?

9) ಮಿಶ್ರ ಬೇಸಾಯ ಎಂದರೇನು?

10. ತೋಟಗಾರಿಕೆ ಬೇಸಾಯ ಎಂದರೇನು?

11. ಬೆಳೆಗಳ ಮಾದರಿ ಎಂದರೇನು?

12. ಮುಂಗಾರು ಅಥವಾ ಖಾರೀಫ್ ಬೇಸಾಯ ಎಂದರೇನು?

13. ಭಾರತದ ರೈತರು ಜೂನ್–ಜುಲೈ ತಿಂಗಳಿನಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಿನಲ್ಲಿ ಕಟಾವು ಮಾಡುತ್ತಾರೆ.ಏಕೆ?

14. ಹಿಂಗಾರು ಅಥವಾ ರಬಿ ಬೇಸಾಯ ಎಂದರೇನು?

15. ಜೇಡ್ (ಬೇಸಿಗೆ) ಬೇಸಾಯ ಎಂದರೇನು?

16. ರೈತರು ಬೇಸಿಗೆಯ ಅವಧಿಯಲ್ಲಿ ತರಕಾರಿ, ಎಣ್ಣೆಕಾಳುಗಳು, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಬೆಳೆಯುವರು ಇದು ಯಾವ ಋತುವಿಗೆ ಉದಾಹರಣೆಯಾಗಿದೆ?

17. ಭಾರತದ ಪ್ರಮುಖ ನಾರು ಬೆಳೆಗಳನ್ನು ಹೆಸರಿಸಿರಿ.

18. ಭಾರತದಲ್ಲಿ ಸ್ಥಳಾಂತರ ಬೇಸಾಯ ಇಂದು ಕಡಿಮೆಯಾಗಲು ಕಾರಣವೇನು

19. ತಂಬಾಕು ಮಾರುಕಟ್ಟೆ ಇರುವ ಕರ್ನಾಟಕದ ಸ್ಥಳ

20. ಫ್ಲೋರಿಕಲ್ಚರ್ ಎಂದರೇನು?

## ಅಧ್ಯಾಯ 7– ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

### ಬಹು ಆಯ್ಕೆ ಪ್ರಶ್ನೆಗಳು

1. ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು ಹೀಗೆನ್ನುವರು.

ಎ) ಕೈಗಾರಿಕೆ ಬಿ) ಗಣಿಗಾರಿಕೆ ಸಿ) ಪಶುಪಾಲನೆ ಡಿ) ತೋಟಗಾರಿಕೆ

2. ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ ಖನಿಜ.

ಎ) ಕಬ್ಬಿಣದ ಅದಿರು ಬಿ) ಮ್ಯಾಂಗನೀಸ್ ಅದಿರು ಸಿ) ಬಾಕ್ಸೈಟ್ ಡಿ) ಅಭ್ರಕ

3. ಬಾಕ್ಸೈಟ್ ಅದಿರಿನಿಂದ ಉತ್ಪಾದಿಸಲಾಗುವ ಲೋಹ

ಎ) ಕಬ್ಬಿಣ ಬಿ) ಅಲ್ಯೂಮಿನಿಯಂ ಸಿ) ಚಿನ್ನ ಡಿ) ಮ್ಯಾಂಗನೀಸ್

4. ಸಸ್ಯಾವಶೇಷವುಳ್ಳ ಇಂಧನ ಖನಿಜ

ಎ) ಕಲ್ಲಿದ್ದಲು ಬಿ) ಪೆಟ್ರೋಲಿಯಂ ಸಿ) ಜಲವಿದ್ಯುಚ್ಛಕ್ತಿ ಡಿ) ಪರಮಾಣು ಶಕ್ತಿ

5. ಭಾರತದಲ್ಲೇ ಅತಿ ಹೆಚ್ಚು ಕಚ್ಚಾ ತೈಲ ಉತ್ಪಾದಿಸುವ ಪ್ರದೇಶ ಇದಾಗಿದೆ.

ಎ) ಬಾಂಬೆ ಹೈ ಬಿ) ಅಂಕಲೇಶ್ವರ ಸಿ) ಕ್ಯಾಂಬೆ ಡಿ) ಕಲೋಲ್

6. ಭಾರತದ ಮೊಟ್ಟಮೊದಲ ಜಲವಿದ್ಯುಚ್ಚಕ್ತಿ ಯೋಜನೆ ಇದಾಗಿದೆ.

ಎ) ಮೆಟ್ಟೂರು ಬಿ) ಪೈಕಾರ ಸಿ) ಪೆರಿಯಾರ್ ಡಿ) ಶಿವನಸಮುದ್ರ

7. ಭಾರತದ ಅತ್ಯಂತ ಪ್ರಮುಖವಾದ ಅಲೋಹ ಖನಿಜ.

ಎ) ಕಬ್ಬಿಣ ಬಿ) ಮ್ಯಾಂಗನೀಸ್ ಸಿ) ಅಲ್ಯೂಮಿನಿಯಂ ಡಿ) ಅಭ್ರಕ

8 ಸಾಂಪ್ರದಾಹಿಕ ಶಕ್ತಿ ಸಂಪನ್ಮೂಲಕ್ಕೆ ಉದಾಹರಣೆ.

ಎ) ಪವನ ಶಕ್ತಿ ಬಿ) ಸೌರಶಕ್ತಿ ಸಿ) ಜೈವಿಕ ಅನಿಲ ಡಿ) ಕಲ್ಲಿದ್ದಲು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1) ಖನಿಜ ಎಂದರೇನು?

2) ಬಾಕ್ಸೈಟ್‌ನ್ನು 20 ನೇ ಶತಮಾನದ ಅದ್ಭುತ ಲೋಹೆಂದು ಕರೆಯುತ್ತಾರೆ. ಏಕೆ?

3) ಭಾರತದಿಂದ ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆ?

4) ಕಲ್ಲಿದ್ದಲು ಹೇಗೆ ಉತ್ಪತ್ತಿ ಹೊಂದಿದೆ?

5) ಕಲ್ಲ್ಲಿದ್ದಲನ್ನು "ಕಪ್ಪ ಬಂಗಾರ" ಎಂದು ಕರೆಯುತ್ತಾರೆ. ಏಕೆ?

6) ಕಚ್ಚಾ ತೈಲ ಎಂದರೇನು?

7) ಪೆಟ್ರೋಲಿಯಂನ್ನು "ದ್ರವರೂಪದ ಚಿನ್ನ"ಎಂದು ಕರೆಯುತಾ್ತರೆ. ಏಕೆ?

8) ಭಾರತ ವಿದೇಶಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತದೆ.ಏಕೆ?

9) ಅಸಾಂಪ್ರದಾಯಕ ಶಕ್ತಿ ಮೂಲಗಳೆಂದರೇನು?

10) ಸೌರಶಕಿ್ತ ಎಂದರೇನು?

**ಅಧ್ಯಾಯ 8–ಭಾರತದ ಸಾರಿಗೆ ಹಾಗೂ ಸಂಪರ್ಕ**

**ಬಹು ಆಯ್ಕೆ ಪ್ರಶ್ನೆಗಳು**

1. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಇವರು ನೋಡಿಕೊಳ್ಳುತ್ತಾರೆ.

ಎ) ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬಿ) ರಾಜ್ಯ ಲೋಕೋಪಯೋಗಿ ಇಲಾಖೆ

ಸಿ) ಕೇಂದ್ರ ಲೋಕೋಪಯೋಗಿ ಇಲಾಖೆ ಡಿ) ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ

2. ಭಾರತದ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು

ಎ) ಚೆನ್ನೈ ಬಿ) ಮುಂಬೈ ಸಿ) ಕಲ್ಕತ್ತ ಡಿ) ಮಂಗಳೂರು

3 ಕಾಂಡ್ಲಾ ಬಂದರನ್ನು ಹೊಂದಿರುವ ರಾಜ್ಯ

ಎ) ತಮಿಳುನಾಡು ಬಿ) ಮಹರಾಷ್ಟ್ರ ಸಿ) ಕರ್ನಾಟಕ ಡಿ) ಗುಜರಾತ್

4 ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಥಾಪನೆಯಾದ ವರ್ಷ

ಎ) 1978 ಬಿ) 1989 ಸಿ) 1986 ಡಿ) 1976

5 ಕೊಲ್ಕತ್ತಾದ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ನಿರ್ಮಿತವಾದ ಕೃತಕ ಬಂದರು

ಎ) ತುತುಕುಡಿ ಬಿ) ನವಶೇವಾ ಸಿ) ಹಾಲ್ಡಿಯಾ ಡಿ) ಮಂಗಳೂರು

6. ದಿ ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆ ಸ್ಥಾಪನೆಯಾದ ವರ್ಷ

ಎ) 1955 ಬಿ) 1956 ಸಿ) 1985 ಡಿ) 11975

7. ಭಾರತದ ಕೃತಕ ಮತ್ತು ಹಳೆಯ ಬಂದರುಗಳಲ್ಲಿ ಒಂದಾಗಿದೆ.

ಎ) ಚನ್ನೈ ಬಿ) ನವಶೇವಾ ಸಿ) ವಿಶಾಖಪಟ್ಟಣ ಡಿ) ಕೊಚ್ಚಿ

8 ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು.

ಎ) ಸುಭಾಷ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಬಿ) ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಸಿ) ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಡಿ) ನಾಢಪ್ರಭು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1) ಸಾರಿಗೆ ಎಂದರೇನು?

2) ಭಾರತ ಸರಕಾರವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಲು ಕಾರಣವೇನು?

3) ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದರೇನು?

4) ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ ಎಂದರೇನು?

5) ಪಾತ್ ಫೈಂಡರ್ ಎಂದರೇನು?

6) ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್. ವ್ಯವಸ್ಥೆಗೆ ಯಾವ ಹೆಸರನ್ನು ಇಡಲಾಗಿದೆ?.

7) ದೂರ ಸಂವೇದಿ ತಂತ್ರಜ್ಞಾನ ಎಂದರೇನು?

## ಅಧ್ಯಾಯ 9 – ಭಾರತದ ಪ್ರಮುಖ ಕೈಗಾರಿಕೆಗಳು

### ಬಹು ಆಯ್ಕೆ ಪ್ರಶ್ನೆಗಳು

1. ಮೂಲ ಕೈಗಾರಿಕೆ ಎಂದು ಕರೆಯಲ್ಪಡುವುದು.

ಎ) ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಬಿ) ಕಾಗದ ಕಾರ್ಖಾನೆ

ಸಿ) ಅಲ್ಯೂಮಿನಿಯಂ ಕೈಗಾರಿಕೆ ಡಿ) ಹತ್ತಿಬಟ್ಟೆ ಕೈಗಾರಿಕೆ

2. ಕಬ್ಬಿಣೇತರ ಲೋಹಕ್ಕೆ ಉದಾಹರಣೆ

ಎ) ಬಾಕ್ಸೈಟ್ ಬಿ) ಮ್ಯಾಂಗನೀಸ್ ಸಿ) ಅಲ್ಯೂಮಿನಿಯಂ ಡಿ) ಅಭ್ರಕ

3. ಭಾರತದ 'ಕಾಟನೋಪೋಲಿಸ್' ಎಂದು ಕರೆಯಲ್ಪಡುವ ನಗರ

ಎ) ದೆಹಲಿ ಬಿ) ಬೆಂಗಳೂರು ಸಿ) ಕಲ್ಕತ್ತ ಡಿ) ಮುಂಬಯಿ

4. ಭಾರತದ ಪ್ರಥಮ ಕಾಗದ ಕೈಗಾರಿಕೆ ಸ್ಥಾಪನೆಯಾದ ಸ್ಥಳ

ಎ) ಸೆರಾಂಪುರ ಬಿ) ಕಲ್ಕತ್ತ ಸಿ) ಜಯ್‌ಕಾಯ್ ಡಿ) ಕುಲ್ಟಿ

5. ಭಾರತದ ಸಿಲಿಕಾನ್ ಸಿಟಿ ಎಂದು ಕರೆಯಲ್ಪಡುವ ನಗರ

ಎ) ಬೆಂಗಳೂರು ಬಿ) ಮೈಸೂರು ಸಿ) ಹೈದರಾಬಾದ್ ಡಿ) ಚೆನ್ನೈ

6 ವಿವಿಧ ಬಗೆಯ ನಾರುಗಳಿಂದ ಬಟ್ಟೆ ತಯಾರಿಸುವುದನ್ನು

ಎ) ಕಾಗದದ ಕೈಗಾರಿಕೆ ಬಿ) ಜವಳಿ ಕೈಗಾರಿಕೆ ಸಿ) ಸಕ್ಕರೆ ಕೈಗಾರಿಕೆ ಡಿ) ಜ್ಞಾನಾಧಾರಿತ ಕೈಗಾರಿಕೆ

7 ಭಾರತದ ಮೊದಲ ಉಕ್ಕಿನ ಕೈಗಾರಿಕೆ

ಎ) ಪಶ್ಚಿಮ ಬಂಗಾಳದ ಕುಲ್ಟಿ ಬಿ) ಭದ್ರಾವತಿ ಸಿ) ಸೆರಾಂಪುರ ಡಿ) ದುರ್ಗಾಪುರ

8 ನೆಮ್ಮದಿ, ಆಧಾರ್,ಸಕಾಲ ಇವುಗಳಿಗೆ ಸಂಬಂಧಿಸಿದೆ.

ಎ) ಮಾಹಿತಿ ತಂತ್ರಜ್ಞಾನ ಬಿ) ಜೈವಿಕ ತಂತ್ರಜ್ಞಾನ ಸಿ) ಉನ್ನತ ತಂತ್ರಜ್ಞಾನ ಡಿ) ಜ್ಞಾನಾಧಾರಿತ ತಂತ್ರಜ್ಞಾನ

9 ಉನ್ನತ ತಂತ್ರಜ್ಞಾನದ ಬಳಕೆಯನ್ನು ಅಧಿಕೃತವಾಗಿ ಜಾರಿಗೆ ತಂದ ವರ್ಷ

ಎ) 1990 ಬಿ) 1980 ಸಿ) 1960 ಡಿ) 1990

10 ವ್ಯವಸಾಯದಲ್ಲಿ ದೊಡ್ಡ ಕ್ರಾಂತಿ ಪ್ರಾರಂಭವಾಗಲು ಕಾರಣವಾದ ಅಂಶ

ಎ) ಮಾಹಿತಿ ತಂತ್ರಜ್ಞಾನ ಬಿ) ಜೈವಿಕ ತಂತ್ರಜ್ಞಾನ ಸಿ) ಉನ್ನತ ತಂತ್ರಜ್ಞಾನ ಡಿ) ಜ್ಞಾನಾಧಾರಿತ ತಂತ್ರಜ್ಞಾನ

ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1) ಕೈಗಾರಿಕೆ ಎಂದರೇನು?

2) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎನ್ನಲು ಕಾರಣವೇನು?

3) ಗಂಗಾನದಿ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿವೆ. ಏಕೆ?

4) ಜವಳಿ ಕೈಗಾರಿಕೆ ಎಂದರೇನು?

5) ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಅಥವಾ ಕಾಟನೋಪೊಲಿಸ್ ಎಂದು ಕರೆಯುತ್ತಾರೆ. ಏಕೆ?

6) ಜ್ಞಾನಾಧಾರಿತ ಕೈಗಾರಿಕೆ ಎಂದರೇನು?

7) ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಕಾರಣವೇನು?

8) ಭಾರತದ ಸಿಲಿಕಾನ್ ಸಿಟಿ ಎಂದು ಬೆಂಗಳೂರನ್ನು ಏಕೆ ಕರೆಯುತ್ತಾರೆ?

## ಅಧ್ಯಾಯ 10– ನೈಸರ್ಗಿಕ ವಿಪತ್ತುಗಳು

### ಬಹುಆಯ್ಕೆ ಪ್ರಶ್ನೆಗಳು

1. ಭಾರತದಲ್ಲಿ ಆವರ್ತ ಮಾರುತಗಳು ಸಾಮನ್ಯವಾಗಿ ಈ ಅವಧಿಯಲ್ಲಿ ಸಂಭವಿಸುತ್ತವೆ.

ಎ) ಜನವರಿ–ಫೆಬವ್ರರಿ ಬಿ) ಮಾರ್ಚ್–ಏಪ್ರಿಲ್ ಸಿ) ಅಕ್ಟೋಬರ್–ನವಂಬರ್ ಡಿ) ಡಿಸಂಬರ್– ಜನವರಿ

2. ಪರ್ವತ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಸಂಭವಿಸುವ ವಿಕೋಪಗಳೆಂದರೆ

ಎ) ಪ್ರವಾಹಗಳು ಬಿ) ಭೂಕುಸಿತಗಳು ಸಿ) ಭೂಕಂಪನಗಳು ಡಿ) ಆವರ್ತ ಮಾರುತಗಳು

3 ಕಡಲ ಕೊರೆತವನ್ನು ನಿಯಂತ್ರಿಸಲು ಬೆಳೆಸುವ ಅರಣ್ಯದ ಪ್ರಕಾರ

ಎ) ನಿತ್ಯಹರಿದ್ವರ್ಣ ಕಾಡುಗಳು ಬಿ) ಮ್ಯಾಂಗ್ರೂವ್ ಕಾಡುಗಳು

ಸಿ) ಪರ್ವತ ಕಾಡುಗಳು ಡಿ) ಎಲೆ ಉದುರಿಸುವ ಕಾಡುಗಳು

4 ಇವುಗಳಲ್ಲಿ ಭೂ ಕಂಪನ ನಿಯಂತ್ರಣದ ಒಂದು ಕ್ರಮವೆಂದರೇ?

ಎ) ಕರಾವಳಿ ತೀರದಲ್ಲಿ ತಡೆಗೋಡೆಗಳ ನಿರ್ಮಾಣ ಬಿ) ಮ್ಯಾಂಗ್ರೂವ್ ಕಾಡುಗಳ ಅಭಿವೃದ್ದಿ

ಸಿ) ಅಂತರ್ಜಲಕ್ಕಾಗಿ ಆಳ ಬಾವಿ ಕೊರೆಯುವುದು ನಿಷೇಧ ಡಿ) ಮಣ್ಣಿನ ಸವೆತ ನಿಯಂತ್ರಣ

5 ಅಸ್ಸಾಂ ರಾಜ್ಯದಲ್ಲಿ ಪ್ರವಾಹ ಉಂಟಾಗಲು ಕಾರಣವಾದ ನದಿಗಳ ಸರಿಯಾದ ಜೋಡಣೆ

ಎ) ಘಟಪ್ರಭಾ, ಮಲಪ್ರಭಾ, ದೋಣಿ, ಕೃಷ್ಣಾ ಬಿ) ಗಂಡಕ್.ಕೋಸಿ.ಯಮುನಾ, ಘಾಗ್ರ,

ಸಿ) ನರ್ಮದಾ, ತಪತಿ, ಸಬರಮತಿ, ಮಾಹಿ, ಡಿ) ದಿಹಾಂಗ, ದಿಬಾಂಗ, ಸುಬನ್‌ಸಿರಿ. ಲೂಹಿತ್

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1) ನೈಸರ್ಗಿಕ ವಿಪತ್ತುಗಳು ಎಂದರೇನು?

2) ನದಿ ಪ್ರವಾಹಗಳು ಎಂದರೇನು?

2) ಹಿಮಾಲಯ ಪರ್ವತಗಳಲ್ಲಿ ಆಗಿಂದಾಗ್ಗೆ ಕ್ಷಿಪ್ರ ಪ್ರವಾಹಗಳು ಉಂಟಾಗಲು ಕಾರಣವೇನು?

3) ಭೂಕುಸಿತ ಎಂದರೇನು?

4) ಗಣಿಗಾರಿಕೆ ಪ್ರದೇಶದಲ್ಲಿ ಭೂಕುಸಿತ ಉಂಟಾಗಲು ಕಾರಣವೇನು?

7) ಕಡಲಕೊರೆತ ಎಂದರೇನು?

8) ಭಾರತದ ಪಶ್ಚಿಮ ಕರಾವಳಿ ತೀರದಲ್ಲಿ ಕಡಲ ಕೊರೆತ ಹೆಚ್ಚಾಗಿರುತ್ತದೆ. ಏಕೆ?

9) ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತ ಕಡಿಮೆ. ಏಕೆ?

10) ಭೂಕಂಪ ಎಂದರೇನು?

## ಅರ್ಥಶಾಸ್ತ್ರ

### ಆಧ್ಯಾಯ 1– ಅರ್ಥವ್ಯವಸ್ಥೆ ಮತ್ತು ಸರ್ಕಾರ

### ಬಹು ಆಯ್ಕೆಯ ಪ್ರಶ್ನೆಗಳು

1. ಮೊಟ್ಟಮೊದಲು ಆರ್ಥಿಕ ಯೋಜನೆಗಳನ್ನು ಜಾರಿಗೊಳಿಸಿದ ದೇಶ

ಎ) ಅಮೇರಿಕಾ ಬಿ) ಬ್ರಿಟನ್ ಸಿ) ರಷ್ಯಾ ಡಿ) ಫ್ರಾನ್ಸ್

2. ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ ಈ ಪುಸ್ತಕವನ್ನು ಪ್ರಕಟಿಸಿದವರು

ಎ) ಸರ್.ಎಂ ವಿಶ್ವೇಶ್ವರಯ್ಯ ಬಿ) ಮಹಾತ್ಮ ಗಾಂಧೀಜಿ

ಸಿ) ಜವಾಹರ್‌ಲಾಲ ನೆಹರು ಡಿ) ದಾದಭಾಯಿ ನವರೋಜಿ

3. ಭಾರತದ ಹಸಿರು ಕ್ರಾಂತಿಯ ಪಿತಾಮಹಾ

ಎ) ಡಾ.ನಾರ್ಮನ್ ಬೋರ್ಲಾಗ್ ಬಿ) ಸ್ವಾಮಿನಾಥ್ ಸಿ) ವರ್ಗೀಸ್ ಕುರಿಯನ್ ಡಿ) ಮೇಧಾ ಪಾಟ್ಕರ್

4. ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ ಪ್ರಾಮುಖ್ಯತೆ ನೀಡಿದ ಪಂಚವಾರ್ಷಿಕ ಯೋಜನೆ

ಎ) 10ನೇ ಬಿ) 13ನೇ ಸಿ) 9ನೇ ಡಿ) 11ನೇ

5. ನೀತಿ ಆಯೋಗ ಸ್ಥಾಪನೆಯಾದ ವರ್ಷ

ಎ) 2013 ಬಿ) 2014 ಸಿ) 2015 ಡಿ) 2012

6. ನೀತಿ ಆಯೋಗದ ನೇತೃತ್ವವನ್ನು ಪ್ರಧಾನಿ ವಹಿಸಿಕೊಂಡರೆ, ದಿನವಹಿ ಆಡಳಿತವನ್ನು ನಿರ್ವಹಿಸುವವರು

ಎ) ರಾಷ್ಟ್ರಪತಿ ಬಿ) ಉಪಾಧ್ಯಕ್ಷರು ಸಿ) ಲೋಕಸಭೆಯ ಸಭಾಪತಿ ಡಿ) ಕೇಂದ್ರ ಹಣಕಾಸು ಸಚಿವರು

**ಈ ಕೆಳಗಿನ ಪ್ರಶ್ನೆಗಳಿಗೆ ಒಮದು ವಾಕ್ಯದಲ್ಲಿ ಉತ್ತರಿಸಿ.**

1. ಭಾರತದ ಆರ್ಥಿಕ ಯೋಜನೆಯ ಪಿತಾಮಹ ಯಾರು?

2. ಸುಗ್ಗಿ ಪೂರ್ವ ತಂತ್ರಜ್ಞಾನ ಎಂದರೇನು?

3. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?

4. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಸಂಸ್ಥೆ ಯಾವುದು?

5. ರಾಷ್ಟ್ರೀಯ ಯೋಜನಾ ಆಯೋಗ ಸ್ಥಾಪನೆಯಾದ ವರ್ಷ ಯಾವುದು?

6. ಹಸಿರು ಕ್ರಾಂತಿ ಎಂದರೇನು?

7. ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ಣಿಡುವ ಸಂಸ್ಥೆ ಯಾವುದು?

8. ಆರ್ಥಿಕ ಯೋಜನೆಗಳ ಮೂಲ ಉದ್ದೇಶವೇನು?

## ಅಧ್ಯಾಯ 2– ಗ್ರಾಮೀಣಾಭಿವೃದ್ಧಿ

### ಬಹು ಆಯ್ಕೆ ಪ್ರಶ್ನೆಗಳು

1 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ ಎಂದು ಹೇಳಿದವರು

ಎ) ಡಾ.ಬಿಆರ್. ಅಂಬೇಡ್ಕರ್ ಬಿ) ಜವಹಾರಲಾಲ್ ನೆಹರು

ಸಿ) ಲಾಲ್ ಬಹದ್ದೂರ್ ಶಾಸ್ತ್ರಿ ಡಿ) ಮಹಾತ್ಮ ಗಾಂಧೀಜಿ

2. ಮಹತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಉದ್ದೇಶ

ಎ) ಉದ್ಯೋಗ ನಿರ್ಮಾಣ ಮತ್ತು ವಸತಿ ನಿರ್ಮಾಣ

ಬಿ) ಉದ್ಯೋಗ ನಿರ್ಮಾಣ ಮತ್ತು ನೀರಾವರಿ ಯೋಜನೆ

ಸಿ) ಉದ್ಯೋಗ ನಿರ್ಮಾಣ ಮತ್ತು ಬಡತನ ನಿರ್ಮೂಲನೆ

ಡಿ) ಉದ್ಯೋಗ ನಿರ್ಮಾಣ ಮತ್ತು ಗುಡಿ ಕೈಗಾರಿಕಾ ಅಭಿವೃದ್ಧಿ

3. ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಾಕ ಸ್ಥಾನಮಾನ ದೊರಕಿಸಿಕೊಟ್ಟ ಸಂವಿಧಾನದ ತಿದ್ದುಪಡಿ

ಎ) 86ನೇ ಬಿ) 73ನೇ ಸಿ) 93ನೇ ಡಿ) 42ನೇ

4. ಪಂಚಾಯತ್ ಸಂಸ್ಥೆಗಳು ಈ ತತ್ವದಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.

ಎ) ಕೇಂದ್ರೀಕರಣ ಬಿ) ಪ್ರಜಾಪ್ರಭುತ್ವ ಸಿ) ಸಹಕಾರ ಡಿ)ಅಭಿವೃದ್ಧಿ

5. ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಸಂವಿಧಾನಾತ್ಮಕವಾಗಿ ಅಸ್ಥಿತ್ವಕ್ಕೆ ಬಂದ ವರ್ಷ

ಎ) 1983 ಬಿ) 2003 ಸಿ) 1993 ಡಿ) 2013

6. ಸಂವಿಧಾನದ 73ನೇ ತಿದ್ದುಪಡಿ ತಂದ ಪ್ರಮುಖ ಉದ್ದೇಶ

ಎ) ದೇಶಾದ್ಯಂತ ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿ

ಬಿ) ಜಾತ್ಯತೀತ ಪದವನ್ನು ಸೇರ್ಪಡೆಮಾಡಲು

ಸಿ) ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಕೆ ಮಾಡಲು

ಡಿ) ಅಸ್ಪೃಶತೆ ನಿರ್ಮೂಲನೆಗಾಗಿ

7. ಆಶ್ರಯ ಯೋಜನೆ ಜಾರಿಗೆ ತಂದ ಉದ್ದೇಶ

ಎ) ಉದ್ಯೋಗ ಒದಗಿಸಲು ಬಿ) ವ್ಯವಸಾಯ ಭೂಮಿ ಒದಗಿಸಲು

ಸಿ) ಶಿಕ್ಷಣ ಒದಗಿಸಲು ಡಿ) ವಸತಿ ಒದಗಿಸಲು

8. ಈ ಕೆಳಗಿನವುಗಳಲ್ಲಿ ಯಾವುದು ವಸತಿಹೀನರಿಗೆ ವಸತಿ ಒದಗಿಸುವ ಯೋಜನೆಯಾಗಿಲ್ಲ

ಎ) ಸುವರ್ಣ ಗ್ರಾಮ ವಸತಿ ಯೋಜನೆ ಬಿ) ಆಶ್ರಯ ಯೋಜನೆ

ಸಿ) ಪ್ರಧಾನ ಮಂತ್ರಿ ಅವಾಸ್ ಯೋಜನೆ ಡಿ) ಅಂಬೇಡ್ಕರ್ – ವಾಲ್ಮೀಕಿ ಯೋಜನೆ

## ಆಧ್ಯಾಯ 3– ಸಾರ್ವಜನಿಕ ಹಣಕಾಸು

### ಬಹು ಆಯ್ಕೆ ಪ್ರಶ್ನೆಗಳು

1. ಇವುಗಳಲ್ಲಿ ಪ್ರತ್ಯಕ್ಷ ತೆರಿಗೆ

ಎ) ವ್ಯಾಟ್ ಬಿ) ಜಿ ಎಸ್ ಟಿ ಸಿ) ವೃತ್ತಿ ತೆರಿಗೆ ಡಿ) ಆಮದು ಮತ್ತು ರಫ್ತುತೆರಿಗೆ

2. ಕೆಳಗಿನವುಗಳಲ್ಲಿ ಸರ್ಕಾರದ ತೆರಿಗೆಯೇತರ ವರಮಾನ ಆಗಿರುವುದು

ಎ) ಸರಕು ಮತ್ತು ಸೇವಾ ತೆರಿಗೆ ಬಿ) ವಿವಿಧ ರೀತಿಯ ಶುಲ್ಕ ಮತ್ತು ದಂಡಗಳು

ಸಿ) ಆಮದು ಮತ್ತು ರಫ್ತುಸುಂಕ ಡಿ) ಸ್ಟ್ಯಾಂಪ್

3. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಸಾಮಾನ್ಯವಾಗಿ ಮಂಡಿಸುತ್ತಿರುವ ಆಯವ್ಯಯ

ಎ) ಕೊರತೆ ಆಯವ್ಯಯ ಬಿ) ಉಳಿತಾಯ ಆಯವ್ಯಯ

ಸಿ) ಸಮತೋಲನ ಆಯವ್ಯಯ ಡಿ) ವಿತ್ತೀಯ ಆಯವ್ಯಯ

4. ಕೇಂದ್ರ ಸರ್ಕಾರದ ಆಯವ್ಯವನ್ನು ಲೋಕಸಭೆಯಲ್ಲಿ ಮಂಡಿಸುವವರು

ಎ) ಪ್ರಧಾನ ಮಂತ್ರಿಗಳು ಬಿ) ಸಭಾಪತಿ ಸಿ) ಉಪರಾಷ್ಟ್ರಪತಿ ಡಿ) ಹಣಕಾಸು ಸಚಿವರು

5. ಸರ್ಕಾರವು ಆಂತರಿಕ ಹಾಗೂ ವಿದೇಶಿ ಸಾಲಗಳ ಮೂಲಕ ಸಂಗ್ರಹಿಸುವ ಆದಾಯ

ಎ) ಕಂದಾಯ ಆದಾಯ ಬಿ) ಯೋಜನಾ ಆದಾಯ

ಸಿ) ತೆರಿಗೇತರ ಆದಾಯ ಡ) ಬಂಡವಾಳ ಆದಾಯ

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ಪ್ರತ್ಯಕ್ಷ ತೆರಿಗೆ ಎಂದರೇನು?

2. ಕೊರತೆ ಆಯವ್ಯಯ ಎಂದರೇನು?

3. ಪರೋಕ್ಷ ತೆರಿಗೆ ಎಂದರೇನು?

4. ಆಯವ್ಯಯ ಎಂದರೇನು?

5. ಸಾರ್ವಜನಿಕ ವೆಚ್ಚ ಎಂದರೇನು?

6. ವಿತ್ತೀಯ ನೀತಿ ಎಂದರೇನು?

7. ಸರ್ಕಾರಗಳು ಪ್ರಗತಿಪರ ತೆರಿಗೆ ನೀತಿಯನ್ನು ಏಕೆ ಅನುಸರಿಸುತ್ತಾರೆ?

8. ಸರ್ಕಾರದ ಅಭಿವೃದ್ಧಿ ಯೋಜನೆಗಳಿಂದಾಗಿ ಸಂತ್ರಸ್ತರಾಗುವ ಜನರಿಗೆ ಮಾಡುವ ವೆಚ್ಚವನ್ನು ಏನೆಂದು ಕರೆಯುತ್ತಾರೆ?

## ವ್ಯವಹಾರ ಅಧ್ಯಯನ

## ಅಧ್ಯಾಯ 1– ಬ್ಯಾಂಕ್ ವ್ಯವಹಾರಗಳು

### ಬಹು ಆಯ್ಕೆ ಪ್ರಶ್ನೆಗಳು

1. ಬ್ಯಾಂಕ್ ಎಂಬ ಪದವು ಇಟಲಿಯನ್ ನ ಈ ಶಬ್ಧದಿಂದ ಬಂದಿದೆ

ಎ) ಬ್ಯಾಂಕೊ ಬಿ) ಬ್ಯಾಂಕ್ ಸಿ) ಬ್ಯಾಕಿಂಗ್ ಡಿ) ಬ್ಲಾಂಕ್

2. ಬ್ಯಾಂಕೊ ಅಥವಾ ಬ್ಯಾಂಕ್ ಪದದ ಅರ್ಥ

ಎ) ಖಾತೆ ಬಿ) ಹಣ ಸಿ) ಬೆಂಚು ಡಿ) ವಿನಿಮಯ

3. ರಾಷ್ಟ್ರೀಯ ಉಳಿತಾಯ ಪತ್ರ ಮತ್ತು ಕಿಸಾನ್ ವಿಕಾಸ್ ಪತ್ರಗಳನ್ನು ನೀಡುವ ಇಲಾಖೆ

ಎ) ಕಂದಾಯ ಇಲಾಖೆ ಬಿ) ಕಾರ್ಮಿಕ ಇಲಾಖೆ ಸಿ) ಹಣಕಾಸು ಇಲಾಖೆ ಡಿ) ಅಂಚೆ ಇಲಾಖೆ

4. ಬ್ಯಾಂಕ್ ಗಳ ತಾಯಿ ಹಾಗೂ ಕೇಂದ್ರ ಬ್ಯಾಂಕ್ ಎಂದು ಕರೆಯಲ್ಪಡುವ ಬ್ಯಾಂಕ್

ಎ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಿ) ರಿಜರ್ವ್ ಬ್ಯಾಂಕ್

ಸಿ) ಕಾರ್ಪೊರೇಷನ್ ಬ್ಯಾಂಕ್ ಡಿ) ಇಂಡಿಯನ್ ಬ್ಯಾಂಕ್

6. ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಮತ್ತು ಪಿಂಚಣಿದಾರರಿಗೆ ಅನುಕೂಲವಾಗಿರುವ ಬ್ಯಾಂಕ್ ಖಾತೆ.

ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ, ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

7. ದಿನಕ್ಕೆ ಹಣವನ್ನು ಎಷ್ಟು ಬಾರಿಯಾದರೂ ತುಂಬಲು ಹಾಗೂ ಎಷ್ಟು ಬಾರಿಯಾದರೂ ಹಿಂಪಡೆಯಲು ಅವಕಾಶ ನೀಡುವ ಬ್ಯಾಂಕ್ ಖಾತೆ

ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ, ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

8. ಸಾಮಾನ್ಯವಾಗಿ ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಬಹುದಾದ ಖಾತೆ

ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ, ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

## ಆಧ್ಯಾಯ 2: ಉದ್ಯಮಶೀಲತೆ

### ಬಹು ಆಯ್ಕೆ ಪ್ರಶ್ನೆಗಳು

1. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸ್ಥಾಪನೆಯಾದ ವರ್ಷ

ಎ) 1978 ಬಿ) 1988 ಸಿ) 1968 ಡಿ) 1958

2. ಈ ಕೆಳಗಿನವುಗಳಲ್ಲಿ ಯಾವುದು ಉದ್ಯಮ ಪ್ರವರ್ತಕ ಸಂಸ್ಥೆಗೆ ಉದಾಹರಣೆಯಾಗಿದೆ

ಎ) ಮಾರುಕಟ್ಟೆ ಸಲಹಾ ಸಂಸ್ಥೆ ಬಿ) ಜಾಹಿರಾತು ಸೇವಾ ಸಂಸ್ಥೆ

ಸಿ) ನಬಾರ್ಡ್ ಡಿ) ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ

### ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಯಾವ ಪದದಿಂದ ಬಂದಿದೆ?
2. ಉದ್ಯಮಗಾರಿಕೆ ಎಂದರೇನು?
3. ಉದ್ಯಮಿ ಎಂದರೇನು?
4. ಆರ್ಥಿಕತೆಯ "ಅಗ್ನಿಬಿರಟೆ" (ಸ್ಪಾರ್ಕ್ ಪ್ಲಗ್) ಎಂದು ಯಾರನ್ನು ಕರೆಯುತ್ತಾರೆ?
5. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಯಿತು?

## ಆಧ್ಯಾಯ 3 ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

### ಬಹು ಆಯ್ಕೆ ಪ್ರಶ್ನೆಗಳು

1. ರಾಕೇಶನು ರೂ 28000 ಸಾವಿರ ರೂಪಾಯಿಕೊಟ್ಟು ಟಿವಿಯನ್ನು ಖರೀದಿಸುತ್ತಾನೆ. ಅದು ಕೊಂಡ ಎರಡೇ ದಿನಕ್ಕೆ ಕೆಟ್ಟು ಹೋಗುತ್ತದೆ. ಅವನ ಅಹವಾಲನ್ನು ಟಿ.ವಿ.ಕಂಪನಿ ಮನ್ನಿಸುವುದಿಲ್ಲ. ಹಾಗಾದರೆ ರಾಕೇಶನು ದೂರು ಸಲ್ಲಿಸಬೇಕಾದ ಗ್ರಾಹಕರ ವೇದಿಕೆ

ಎ) ರಾಜ್ಯ ಗ್ರಾಹಕರ ವೇದಿಕೆ ಬಿ) ರಾಷ್ಟ ಗ್ರಾಹಕರ ವೇದಿಕೆ

ಸಿ) ತಾಲ್ಲೂಕು ಗ್ರಾಹಕರ ವೇದಿಕೆ ಡಿ) ಜಿಲ್ಲಾ ಗ್ರಾಹಕರ ವೇದಿಕೆ

2. ಗ್ರಾಹಕ ರಕ್ಷಣಾ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಕಟ್ಟಬೇಕಾದ ಶುಲ್ಕ ಅಥವಾ ನೋಂದಾವಣಿ ಶುಲ್ಕ

ಎ) ಸರಕು ಸೇವೆಯ ಒಟ್ಟು ಶೇ 12 ಭಾಗದಷ್ಟು

ಬಿ) ಸರಕು ಸೇವೆಯ ಒಟ್ಟು ಶೇ 10 ಭಾಗದಷ್ಟು

ಸಿ) ಸಿ ಯಾವುದೇ ಹಣ ಪಾವತಿಸುವಂತಿಲ್ಲ

ಡಿ) ಕನಿಷ್ಠ ಶುಲ್ಕ 100

3. ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಯಾದ ವರ್ಷ

ಎ) 1985 ಬಿ) 1984 ಸಿ) 1987 ಡಿ) 1986

4. ವಿಶ್ವ ಗ್ರಾಹಕರ ದಿನಾಚರಣೆಯನ್ನು ಯಾವಾಗ ಅಚರಿಸಲಾಗುತ್ತದೆ?

ಎ) ಸೆಪ್ಟೆಂಬರ್ 15 ಬಿ) ಜನವರಿ 15 ಸಿ) ಡಿಸೆಂಬರ್ 15 ಡಿ) ಮಾರ್ಚ್ 15

4. ಗ್ರಾಹಕ ಸಂರಕ್ಷಣಾ ಮಂಡಳಿಯ ಪ್ರಮುಖ ಕಾರ್ಯವೆಂದರೆ

ಎ) ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ಖಾತರಿಪಡಿಸುವುದು

ಬಿ) ಸರಕು ಮತ್ತು ಸೇವೆಗಳನ್ನು ಕಡಿಮೆ ಬೆಲೆಗೆ ಉತ್ಪಾದಿಸುವುದು

ಸಿ) ಎಲ್ಲಾ ಸರಕು ಮತ್ತು ಸೇವೆಗಳನ್ನು ಬಾಗಿಲಿನ ಹಂತದಲ್ಲಿ ಒದಗಿಸುವುದು

ಡಿ) ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರಕುಗಳನ್ನು ವಿತರಿಸುವುದು

5. ಗ್ರಾಹಕ ಸಂರಕ್ಷಣೆ ಆಂದೋಲನವನ್ನು ಮೊದಲು ಪ್ರಾರಂಭಿಸಿದ ದೇಶ

ಎ) ಭಾರತ ಬಿ) ಅಮೇರಿಕಾ ಸಂಯುಕ್ತ ಸಂಸ್ಥಾನ ಸಿ) ಕೆನಡಾ ಡಿ) ಬ್ರಿಟನ್

6. ಬಳಕೆದಾರರಿಂದ ಹಣಪಡೆದು ವಸ್ತು ಮತ್ತು ಸೇವೆಗಳನ್ನು ನೀಡುವವನು

ಎ) ಬಳಕೆದಾರ ಬಿ) ಅನುಭೋಗಿ ಸಿ) ಗ್ರಾಹಕ ಡಿ) ಪೂರೈಕೆದಾರ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ವಿಶ್ವ ಗ್ರಾಹಕರ ದಿನಾಚರಣೆಯನ್ನು ಯಾವಾಗ ಆಚರಿಸಲಾಗುತ್ತದೆ?
2. ಟೆಲಿಶಾಪಿಂಗ್ ಎಂದರೇನು?
3. ಗ್ರಾಹಕರ ರಕ್ಷಣೆ ಅಗತ್ಯವೇನು?
4. ವಿಶ್ವ ಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15 1962 ಏಕೆ ಒಂದು ಮಹತ್ವದ ದಿನವಾಗಿದೆ?
5. ಪ್ರತಿವರ್ಷ ಮಾರ್ಚ್ 15ನೇ ತಾರೀಖಿನಂದು ವಿಶ್ವ ಗ್ರಾಹಕರ ದಿನವೆಂದು ಏಕೆ ಆಚರಿಸಲಾಗುತ್ತದೆ?
6. ಮಾರುಕಟ್ಟೆಯ ರಾಜ ಎಂದು ಯಾರನ್ನು ಕರೆಯುತ್ತಾರೆ?
7. ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ವೇದಿಕೆಯ ಅಧ್ಯಕ್ಷರು ಯಾರಾಗಿರುತ್ತಾರೆ?
8. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ?